# ಹಂಪಿ ಟೈಮ್ಸ್
HAMPI TIMES
ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
ಕನ್ನಡ ದಿನಪತ್ರಿಕೆ
KANNADA DAILY




ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ
No.1 Leading in Local News Paper
NEWS PAPER ADS
THE BEST ADVERTISING
PLATFORM TO BOOST
YOUR BUSINESS
Book Your Ads Now!
M:94486 33038



ಸಂಪುಟ:01 • ಸಂಚಿಕೆ:336 • ನೋಂದಣಿ ನಂ.:KARKAN27911 • ವಿಜಯನಗರ • 09.06.2024 • ಭಾನುವಾರ • ಪುಟ:04 • ಬೆಲೆ:2
Volume:01 • Issue:336 • Reg.No:KARKAN27911 • VIJAYANAGARA • 09.06.2024 • Sunday • Page:04 • Rs:2



S.M.TRADERS & SERVICES
ATLAS COPCO
COMPRESSORS, HOSEPIPE, DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201

SCHOOL FOR SALE @ HOSAPETE
Contact for Details
87921 52363


**ಮೈಕ್ರೋ ನ್ಯೂಸ್**

**ಮೂರನೆ ಅವಧಿಗೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸುವ ನರೇಂದ್ರ ಮೋದಿಗೆ ಉಜ್ಜಿನಿ ಶ್ರೀಗಳ ಆಶೀರ್ವಚನ**

>>2

# ಪರವಾನಿಗಿಲ್ಲದೆ ನಡೆಸಿದ ಲಾಡ್ಜ್‌ಗೆ ನೋಟೀಸ್
# ಡಿಸಿ ಕಣ್ಣಿಗೆ ಕಂಡಿದ್ದು, ಅಧಿಕಾರಿಗಳಿಗೆ ಕಾಣಲಿಲ್ಲ!

## ನಗರದ ರಾಜ ಕಾಲುವೆಗಳ ಪರಿಶೀಲನೆ। ತಗ್ಗು ಗುಂಡಿ ಮುಚ್ಚಲು ಸೂಚನೆ। ನಗರಸಭೆ ಅಧಿಕಾರಿಗಳು, ಸಿಬ್ಬಂದಿಯೊಂದಿಗೆ ಸಂಚಾರ
## ಮಳೆಗಾಲ ಹಿನ್ನೆಲೆ ದೂರುಗಳ ಪರಿಶೀಲನೆಗಾಗಿ ರಜೆ ದಿನವೂ ಸೈಕಲ್ ಏರಿ ನಗರ ಸಂಚಾರ ನಡೆಸಿದ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ

■ **ಹಂಪಿ ಟೈಮ್ಸ್ ಹೊಸಪೇಟೆ**

ಮಳೆಗಾಲ ಹಿನ್ನೆಲೆಯಲ್ಲಿ ರಸ್ತೆಗಳು, ಚರಂಡಿಗಳ ಸ್ಥಿತಿಗತಿಯ ಪರಿಶೀಲನೆಗೆ ಶನಿವಾರ ನಗರ ಪ್ರದಕ್ಷಿಣೆ ಕೈಗೊಂಡ ವೇಳೆಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಹೊಸಪೇಟೆ ನಗರ ಕೇಂದ್ರ ಬಸ್ ನಿಲ್ದಾಣಕ್ಕೆ ಸಹ ಭೇಟಿ ಚರಂಡಿ ನೀರು ಬಸ್ ಸ್ಟ್ಯಾಂಡ್ ಆವರಣದಲ್ಲಿ ಹರಿಯುವುದನ್ನು ಗಮನಿಸಿದರು. ದುರ್ವಾಸನೆ ಇದ್ದರು ಕೂಡ ಸರಿಪಡಿಸಲು ತಿಳಿಸಿದಾಗ್ಯೂ ನಿರ್ಲಕ್ಷ್ಯ ವಹಿಸಿದ್ದರಿಂದ ಡಿಪೋ ಮ್ಯಾನೇಜರ್‌ಗೆ ಮ್ಯಾನುಯೆಲ್ ಸ್ಕ್ಯಾವೆಂಜರ್ ಅಧಿನಿಯಮದಡಿ ನೊಟೀಸ್ ಜಾರಿ ಮಾಡಿ ಕಠಿಣ ಕ್ರಮ ವಹಿಸಲು ಪೌರಾಯುಕ್ತರಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಬಸ್ ಸ್ಟಾಂಡ್ ಮುಂಭಾಗ ಹರಿಯುತ್ತಿರುವ ಚರಂಡಿ ನೀರಿನ ಮೂಲದ ಬಗ್ಗೆ ಪರಿಶೀಲಿಸಲು ಜಿಲ್ಲಾಧಿಕಾರಿಗಳು ತಿಳಿಸಿದಾಗ, ಹತ್ತಿರದ ವಿಶ್ವ ಲಾಡ್ಜ್ ಮುಂದೆ ಡ್ರೈನೇಜ್ ಲೈನಲ್ಲಿ ನೀರು ನಿಂತು ಅದು ಬಸ್ ಸ್ಟಾಂಡನತ್ತ ಹರಿಯುತ್ತಿರುವುದು ಕಂಡು ಬಂದಿತು. ನಗರಸಭೆ ಪೌರಾಯುಕ್ತರೊಂದಿಗೆ ಜಿಲ್ಲಾಧಿಕಾರಿಗಳು, ಲಾಡ್ಜ್ ಒಳಗೆ ಪ್ರವೇಶಿಸಿ ಪರಿಶೀಲಿಸಿದರು. ಟ್ರೇಡ್ ಲೈಸೆನ್ಸ್ ಇಲ್ಲದೆ ಲಾಡ್ಜ್ ನಡೆಸುತ್ತಿರುವುದು ಜೊತೆಗೆ ನಗರಸಭೆಯ ಇನ್ನು ಕೆಲವು ಷರತ್ತುಗಳು ಉಲ್ಲಂಘನೆಯಾಗಿರುವುದು ಕಂಡುಬಂದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಈ ಬಗ್ಗೆ ಕೂಡಲೇ ನೋಟಿಸ್ ಜಾರಿ ಮಾಡಲು ಜಿಲ್ಲಾಧಿಕಾರಿಗಳು ಪೌರಾಯುಕ್ತರಿಗೆ ನಿರ್ದೇಶನ ನೀಡಿದ ಬೆನ್ನಲ್ಲೆ ಲಾಡ್ಜ್ ಮಾಲೀಕರಿಗೆ ಬಂದ್ ಮಾಡುವಂತೆ ನೋಟಿಸ್ ಜಾರಿ ಮಾಡಿದ್ದಾರೆ. ಬಸ್ ನಿಲ್ದಾಣದಲ್ಲಿನ ಸಾರ್ವಜನಿಕ ಶೌಚಾಲಯಗಳಲ್ಲಿ ಹೆಚ್ಚಿನ ಹಣ ಪಡೆಯುತ್ತಾರೆ ಎನ್ನುವ ದೂರಿನ ಬಗ್ಗೆ ಸಾರ್ವಜನಿಕರೊಂದಿಗೆ ಚರ್ಚಿಸಿದ ಜಿಲ್ಲಾಧಿಕಾರಿಗಳು, ಹೆಚ್ಚಿನ ಹಣ ಪಡೆದು ಸಾರ್ವಜನಿಕರಿಗೆ ತೊಂದರೆ ಕೊಡಬಾರದು. ಈ ಬಗ್ಗೆ ಅಧಿಕಾರಿಗಳು ಗಮನ ಹರಿಸಬೇಕು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.





**ಅಹವಾಲು ಸ್ವೀಕಾರ:** ಪೌರಕಾರ್ಮಿಕರು ವಾಸಿಸುತ್ತಿರುವ ಪ್ರದೇಶ ಗಳಿಗೆ ಸಹ ಜಿಲ್ಲಾಧಿಕಾರಿಗಳು ಭೇಟಿ ನೀಡಿದರು. ಕೆಲವು ಪೌರ ಕಾರ್ಮಿಕ ಕುಟುಂಬ ದವರಿಂದ ಅಹವಾಲನ್ನು ಸ್ವೀಕರಿಸಿದರು.

**ಡಿಪಿಆರ್ ಸಿದ್ಧಪಡಿಸಲು ಸೂಚನೆ:** ಪ್ರಸಿದ್ದ ಪ್ರವಾಸಿ ತಾಣವಾಗಿರುವ ಹಂಪಿಯ ಪ್ರದೇಶಕ್ಕೆ ನಿತ್ಯ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಾರೆ. ಈ ದಿಶೆಯಲ್ಲಿ ಉತ್ತಮ ರಸ್ತೆ, ಶೌಚಾಲಯ ಮತ್ತು ಕುಡಿಯುವ ನೀರಿನ ಮೂಲಭೂತ ಸೌಕರ್ಯಗಳನ್ನು ಹೊಂದಿ ಹೊಸಪೇಟೆಯು ಸುಂದರ ನಗರವಾಗಿ ಕಾಣಬೇಕು. ಮುಖ್ಯವಾಗಿ ನೈರ್ಮಲ್ಯ ಕಾಪಾಡಲು ವೈಜ್ಞಾನಿಕ ರೀತಿಯಲ್ಲಿ ಚರಂಡಿ ವ್ಯವಸ್ಥೆ ಸರಿಪಡಿಸಲು ಬೇಕಾಗುವ ಡಿಪಿಆರ್ ಅನ್ನು ತಯಾರಿಸಲು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಆರೋಗ್ಯ ನಿರೀಕ್ಷಕರಿಗೆ ಸೂಚನೆ:** ಮಳೆಗಾಲ ಹಿನ್ನೆಲೆಯಲ್ಲಿ ನಗರಸಭೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಮುತುವರ್ಜಿ ವಹಿಸಿ ಕೆಲಸಗಾರರ ತಂಡಗಳನ್ನು ರಚಿಸಿಕೊಂಡು ಕಾರ್ಯನಿರ್ವಹಿಸಬೇಕು. ಮೌಖಿಕ ಸೂಚನೆ ನೀಡಿದಾಗ್ಯೂ ಯಾವುದೇ ಕಡೆಗಳಲ್ಲಿ ಅನೈರ್ಮಲ್ಯದ ಬಗ್ಗೆ ದೂರುಗಳು ಬಂದಲ್ಲಿ ನಗರಸಭೆಯ ಹೆಲ್ತ್ ಇನ್ಸಪೆಕ್ಟರಗಳನ್ನೆ ಹೊಣೆಯಾಗಿಸಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

**ಹೊಸಪೇಟೆ:** ಭಾರತ ಚುನಾವಣಾ ಆಯೋಗವು ಜೂನ್ 06ರಂದು ಹೊರಡಿಸಿದ ಮಾದರಿ ನೀತಿ ಸಂಹಿತೆ ಆದೇಶದೊಂದಿಗೆ ಲೋಕಸಭಾ ಚುನಾವಣೆಯ ಎಲ್ಲ ಪ್ರಕ್ರಿಯೆಗಳು ಮುಕ್ತಾಯಗೊಂಡ ಬೆನ್ನಲ್ಲೇ ಮತ್ತು ಮಳೆ ನಿರಂತರ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಎರಡನೇ ಶನಿವಾರ ರಜೆ ಅವಧಿಯಲ್ಲೂ ಜಿಲ್ಲಾಧಿಕಾರಿಗಳು ಕಾರ್ಯಪ್ರವೃತ್ತರಾಗಿ ನಗರಸಭೆ ಅಧಿಕಾರಿಗಳು ಮತ್ತು ಸಿಬ್ಬಂದಿಯೊಂದಿಗೆ ನಗರದ ವಿವಿಧೆಡೆ ಸಂಚರಿಸಿ, ಮಳೆಗಾಲ ಹಿನ್ನೆಲೆಯಲ್ಲಿ ವಿವಿಧೆಡೆಗಳಲ್ಲಿನ ರಸ್ತೆಗಳು ಮತ್ತು ಚರಂಡಿಗಳ ಸ್ಥಿತಿಗತಿ ಪರಿಶೀಲಿಸಿದರು. ರಾಜ ಕಾಲುವೆಗಳಲ್ಲಿ ಪ್ಲಾಸ್ಟಿಕ್ ಬಾಟಲ್, ಇತರೆ ಕಸ ಕಡ್ಡಿಗಳಿಂದ ನೀರು ನಿಂತು ರಸ್ತೆ ಮೇಲೆ ಹರಿಯುತ್ತಿರುವುದನ್ನು ಕಂಡರು. ನಗರದ ಬೇರೆ ಬೇರೆ ವಾರ್ಡಗಳಿಗೆ ಭೇಟಿ ನೀಡಿ, ಕುಡಿವ ನೀರಿನ ಸರಬರಾಜು ಮತ್ತು ನೈರ್ಮಲ್ಯದ ಬಗ್ಗೆ ಸಾರ್ವಜನಿಕರಿಂದ ಮಾಹಿತಿ ಪಡೆದುಕೊಂಡರು. ನಗರದ ವಿವಿಧೆಡೆಯ ರಸ್ತೆಗಳಲ್ಲಿ ಸಂಚರಿಸುವ ವೇಳೆ ತಗ್ಗು ಗುಂಡಿಗಳನ್ನು ಸಹ ಗಮನಿಸಿದ ಜಿಲ್ಲಾಧಿಕಾರಿಗಳು, ಸುಗಮ ಸಂಚಾರಕ್ಕೆ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮುಖ್ಯ ರಸ್ತೆಗಳು ತಗ್ಗು ಗುಂಡಿಗಳಿಂದ ಮುಕ್ತವಾಗಿರುವಂತೆ ಕ್ರಮ ವಹಿಸಬೇಕು. ಸ್ಪೀಡ್ ಬ್ರೇಕರ್, ರಸ್ತೆ ತಿರುವುಗಳನ್ನು ವೈಜ್ಞಾನಿಕ ರೀತಿಯಲ್ಲಿ ಹಾಕಬೇಕು ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
HAMPI TIMES
VIJAYANAGARA
HAMPI TIMES
Kannada Daily

ವಿಜಯನಗರ ಜಿಲ್ಲೆಯ ಹೆಮ್ಮೆ
ಸ್ಥಳೀಯ ನಂ.1 ಕನ್ನಡ ದಿನಪತ್ರಿಕೆ
ಹಂಪಿ ಟೈಮ್ಸ್ ಇ-ಪೇಪರ್
ವಿಶ್ವದ ವಿವಿಧೆಡೆ ಇರುವ
70,000+
ಕನ್ನಡ ಓದುಗರ ಕೈಯಲ್ಲಿ...

ಸಮಸ್ತ ಓದುಗರಿಗೆ
ಅನಂತ ಧನ್ಯವಾದಗಳು




Hampi Times E-Paper Daily Readers @
in India : Karnataka, Maharastra, Kerala, Telangana, Tamilnadu, Andrapradesh, Uttar Pradesh, Gujarat, Haryan, Odisha and other places.
In International: US , UK, Sweden , Canada and others


# Bamboo Bazaar, Near Valmiki Circle, Hosapete-583201
www.hampitimes.com / https://epaper.hampitimes.com
Email: hampitimes@gmail.com
@hampitimes instagram: @hampitmes

Contact for Advertisement place : 94825 99089/ 94486 33038

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಸ್ವಲ್ಪದರಲ್ಲೇ ಗೆದ್ದುಬಂದ ಬಿಜೆಪಿ ಕೊಡವಿಕೊಂಡು ಎದ್ದ ಕಾಂಗ್ರೆಸ್

ಲೋಕಸಭೆ ಫಲಿತಾಂಶದ ಲೆಕ್ಕಾಚಾರ ತಲೆಕೆಳಗಾಗಿದೆ. ಅತಿ ಆತ್ಮವಿಶ್ವಾಸದಿಂದ ಬೀಗುತ್ತಿದ್ದ ಭಾರತೀಯ ಜನತಾ ಪಾರ್ಟಿಗೆ ಆಘಾತ ತಂದರೆ, ಕಾಂಗ್ರೆಸ್ಸಿಗೆ ಅನಿರೀಕ್ಷಿತ ಫಲಿತಾಂಶ ಬಂದಿದೆ. ಈ ಸಲ ಬಿಜೆಪಿಗೆ ಸ್ವಂತ ಬಲದಿಂದ ಅಧಿಕಾರಕ್ಕೆ ಬರಲು ಸಾಧ್ಯವಾಗಲಿಲ್ಲ. ಮಿತ್ರಪಕ್ಷಗಳ ಮುಲಾಜಿನಲ್ಲಿ ಸರ್ಕಾರ ರಚಿಸಿದೆ. ಇತ್ತ ಕಾಂಗ್ರೆಸ್‌ನಲ್ಲಿ ವಿಶ್ವಾಸ ಮೂಡಿದ್ದು, ಪ್ರಬಲ ಪ್ರತಿಪಕ್ಷವಾಗಿ ಹೊರಹೊಮ್ಮಿದೆ. ಮತಗಟ್ಟೆ ಸಮೀಕ್ಷೆಗಳ ಭವಿಷ್ಯ ಉಲ್ಟಾ ಹೊಡೆದಿದೆ.



ರಾಜಕೀಯ ಪಂಡಿತರ ಲೆಕ್ಕಾಚಾರ ತಪ್ಪಿಹೋಗಿದೆ. ಎಲ್ಲದನ್ನೂ ಮೀರಿ, ಊಹಿಸಲಾರದ ಫಲಿತಾಂಶವನ್ನು ದೇಶದ ಜನರು ನೀಡಿದ್ದಾರೆ. ಸ್ವಂತಂತ್ರವಾಗಿ ಮೂರನೇ ಬಾರಿ ಅಧಿಕಾರ ಗದ್ದುಗೆ ಏರುವ ಅತಿಯಾದ ವಿಶ್ವಾಸದಲ್ಲಿದ್ದ ಬಿಜೆಪಿ ಸ್ಪಷ್ಟ ಬಹುಮತ ಬಂದಿಲ್ಲ. ಈಗೇನಿದ್ದರೂ ಮೈತ್ರಿಪಕ್ಷಗಳನ್ನು, ಅವರು ಬೇಡಿಕೆಗಳನ್ನು, ಅವರ ವಿಶ್ವಾಸವನ್ನು ಗಳಿಸಬೇಕಿದೆ. ಕಳೆದ ಬಾರಿ ಅಧಿಕೃತ ಪ್ರತಿಪಕ್ಷದ ಸ್ಥಾನ ಪಡೆಯಲು ಅಗತ್ಯವಿರುವಷ್ಟು ಸ್ಥಾನ ಪಡೆಯಲು ಸೋತಿದ್ದ ಕಾಂಗ್ರೆಸ್ ಈ ಬಾರಿ ತನ್ನ ಸ್ಥಾನಗಳನ್ನು ಹೆಚ್ಚಿಸಿಕೊಳ್ಳುವ ಮೂಲಕ ಪ್ರಬಲಶಾಲಿಯಾಗಿದೆ. ಒಕ್ಕೂಟದ ಮೂಲಕ ಪ್ರಬಲ ಪ್ರತಿಪಕ್ಷ ರೂಪುಗೊಂಡಿದ್ದು ಆ ಪಕ್ಷಗಳ ನಾಯಕರಿಗೆ ಸಮಾಧಾನ ತಂದಿದೆ. ಆದರೆ ಇದು ಸಾಮಾನ್ಯ ಸಾಧನೆಯಲ್ಲ ಎಂಬುದು ಇಲ್ಲಿ ಗಮನಾರ್ಹ. ಇದು ಬಿಜೆಪಿಗೆ ಎಚ್ಚರಿಕೆ ಗಂಟೆಯೂ ಹೌದು. 2014 ಮತ್ತು 2019ರ ಲೋಕಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತದ ಮೂಲಕ ಅಧಿಕಾರಕ್ಕೆ ಬಂದಿದ್ದ ಬಿಜೆಪಿ ಈ ಬಾರಿ ತಪ್ಪುಗಳ ಹೆಜ್ಜೆ ಇಡುವ ಮೂಲಕ ಎಡವಿದೆ. ಕೇವಲ ಮೋದಿ ಟ್ರಂಪ್ ಕಾರ್ಡ್‌ನಿಂದ ಗೆಲುವು ಸಾಧ್ಯವಿಲ್ಲ ಎಂಬುದನ್ನು ಆ ಪಕ್ಷದ ಇತರೆ ನಾಯಕರು ಅರಿತಿದ್ದಾರೆ. ಕೆಲವೊಮ್ಮೆ ಅತಿ ಆತ್ಮವಿಶ್ವಾಸವೂ ಸ್ಥಾನಗಳ ಕುಸಿತಕ್ಕೆ ಕಾರಣವಾಗಿದೆ. ಸಮಾಧಾನ ಸಂಗತಿಯೆಂದರೆ ಬಿಜೆಪಿ ತೀರಾ ಹೀನಾಯವಾಗಿ ಸೋತಿಲ್ಲ ಎಂಬುದು. ಆದರೆ, ಸ್ವಂತ ಬಲದಿಂದ ಸರ್ಕಾರ ರಚಿಸಲು ಸಾಧ್ಯವಾಗುವಷ್ಟು ಸ್ಥಾನಗಳನ್ನು ಪಡೆದಿಲ್ಲ. ಉತ್ತರ ಭಾರತದ ಕೆಲ ರಾಜ್ಯಗಳಲ್ಲಿ ಕಳೆದ ಬಾರಿಗಿಂತಲೂ ಈ ಬಾರಿ ಬಿಜೆಪಿ ಕಡಿಮೆ ಸ್ಥಾನ ಗಳಿಸಿದೆ. ಈ ನಡುವೆ ದೆಹಲಿ, ಮಧ್ಯಪ್ರದೇಶ, ಹಿಮಾಚಲ ಪ್ರದೇಶ, ಉತ್ತರಾಖಂಡದಲ್ಲಿ ಉತ್ತಮ ಸಾಧನೆ ಮಾಡಿದೆ. ಐಎನ್‌ಡಿಐಎ ಮೈತ್ರಿಕೂಟದಲ್ಲಿ ಹಲವು ಪಕ್ಷಗಳು ಒಂದಾಗಿ 230ರ ಗಡಿ ದಾಟಿದ್ದರೆ, ಬಿಜೆಪಿ ಏಕಾಂಗಿಯಾಗಿ 240 ಸ್ಥಾನಗಳನ್ನು ಪಡೆದಿದೆ. ಮಿತ್ರಪಕ್ಷಗಳೊಂದಿಗೆ ಸರ್ಕಾರ ರಚನೆಯನ್ನೂ ಮಾಡಿದೆ. ಪ್ರತಿ ಚುನಾವಣೆಯಲ್ಲಿ ಮತದಾರರ ಮನಸ್ಸಿನಲ್ಲಿ ಏನಿದೆ ಎಂಬುದು ಸಮೀಕ್ಷೆಗಳು ಹೇಳಲು ಸಾಧ್ಯವಾಗುವುದಿಲ್ಲ. ಹೀಗಾಗಿ 2004ರಂತೆ ಈ ಸಲವೂ ಮತಗಟ್ಟೆ ಸಮೀಕ್ಷೆಗಳು ಸುಳ್ಳಾಗಿವೆ. ಈಗ ಲೋಕಸಭೆ ಚುನಾವಣೆ ಮುಗಿದಿದೆ. ಇತಿಹಾಸ ಪುಟಗಳಲ್ಲಿ ಅದು ದಾಖಲಾಗಿದೆ. ಈಗ ಅಧಿಕಾರಕ್ಕೆ ಬಂದಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಜನರ ಆಶೋತ್ತರ, ನಿರೀಕ್ಷೆಗಳಿಗೆ ಸ್ಪಂದಿಸುವುದನ್ನು ಮೊದಲ ಆದ್ಯತೆಯಾಗಿಸಬೇಕು. ಹಣದುಬ್ಬರ, ನಿರುದ್ಯೋಗ, ರೈತರ ಸಮಸ್ಯೆಗಳು, ಬೆಲೆಯೇರಿಕೆಯಂಥ ಜ್ವಲಂತ ಸಮಸ್ಯೆಗಳಿಗೆ ಮುಕ್ತಿ ಕಾಣಿಸಬೇಕಿದೆ. ಯುವಕರು, ರೈತರು, ಮಹಿಳೆಯರ ಕನಸುಗಳು ಈಡೇರಬೇಕಿವೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ
ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಅನಾಮಧೇಯ ಕರೆ




ಟೇಬಲ್ ಮೇಲೆ ವೈಬ್ರೇಶನ್ ಮೋಡ್ನಲ್ಲಿದ್ದ ಮೊಬೈಲ್ ಫೋನಿನ ಶಬ್ದ ಸುಗುಣಳಲ್ಲಿ ನಡುಕ ಹುಟ್ಟಿಸಿತು. ಭಯದಿಂದಲೇ ರಿಸೀವ್ ಮಾಡಿದ ಆಕೆಗೆ "ಯಾಕ್ರೀ! ಫೋನ್ ರಿಸೀವ್ ಮಾಡ್ತಾನೆ ಇಲ್ಲ? ಎಂದು ಅತ್ತ ಕಡೆಯಿಂದ ಗಂಡಸಿನ ಧ್ವನಿ ಕೇಳಿ ಬಂತು. ತುಸು ಕೋಪದಿಂದಲೇ ಆತನನ್ನು ಗದರಿಸಿ ಕರೆ ತುಂಡರಿಸಿದ ಆಕೆ ಫೋನನ್ನು ಸ್ವಿಚ್ ಆಫ್ ಮಾಡಿ ತಾನು ಕುಳಿತಿದ್ದ ಸೋಫಾದಲ್ಲಿಯೇ ಹಿಂದಕ್ಕೆ ಒರಗಿದಳು. ಕಣ್ಣಂಚಿನಿಂದ ನೀರು ಹನಿಯಾಗಿ ಧಾರೆಯಾಗುತ್ತಿತ್ತು. ಮನಸ್ಸು ಮುಂಜಾನೆ ನಡೆದ ಘಟನೆಯನ್ನು ಮತ್ತೆ ನೆನಪಿಸಿತು.

ಇಂದು ಮುಂಜಾನೆ ಮಗಳನ್ನು ಶಾಲೆಗೆ ಕಳುಹಿಸುವ ಭರದಲ್ಲಿ ಆಲೂ ಪರೋಟ ಮಾಡಿ ಮಗಳಿಗೆ ತಿನ್ನಿಸಿ ಡಬ್ಬಕ್ಕೆ ತಿಂಡಿಯನ್ನು ಹಾಕುತ್ತಿರುವಾಗ ಆಕೆಯ ಮೊಬೈಲ್ ರಿಂಗ್ ಆಗತೊಡಗಿತು. ಒಂದೆರಡು ಬಾರಿ ರಿಂಗ್ ಆಗಿ ಕರೆ ಕಟ್ಟಾಗುವುದು ಎರಡು ಮೂರು ಬಾರಿ ನಡೆದಾಗ ಕುತೂಹಲ ತಡೆಯದೆ ತಾನೇ ಮರಳಿ ಆ ನಂಬರಿಗೆ ಕರೆ ಮಾಡಿದಳು ಸುಗುಣ. ಅತ್ತಲಿಂದ ಮಾತನಾಡಿದ ಗಂಡಸು ಏನ್ರಿ ಚೆನ್ನಾಗಿದ್ದೀರಾ?? ಮತ್ತೇನು ಸಮಾಚಾರ ಎಂದು ಸಲಿಗೆಯಿಂದ ಮಾತನಾಡಲು ಆರಂಭಿಸಿದ. ತುಸು ಗಾಬರಿಯಾದ ಸುಗುಣ ಈ ಸಂಖ್ಯೆಯಿಂದ ಪದೇ ಪದೇ ಕಾಲ್ ಬಂದದ್ದರಿಂದ ಮರಳಿ ಕರೆ ಮಾಡಿದ್ದೇನೆಯೇ ಹೊರತು ನೀವು ಯಾರು ಎಂದೇ ನನಗೆ ಗೊತ್ತಿಲ್ಲ ಎಂದು ಹೇಳಿ ಫೋನ್ ಇಟ್ಟಳು. ಮತ್ತೆ ಅದೇ ನಂಬರ್ ನಿಂದ ಕರೆ ಬಂದಿತು ತುಸು ಗಾಬರಿಯಿಂದಲೇ ಮತ್ತೆ ಎತ್ತಿದ ಸುಗುಣಳಿಗೆ ಆತ ಪರಿಚಿತ ವ್ಯಕ್ತಿಯಂತೆ ಮಾತನಾಡಲು ಆರಂಭಿಸಿದ. ಗಾಬರಿಗೊಂಡ ಸುಗುಣ ಫೋನನ್ನು ಸ್ವಿಚ್ ಆಫ್ ಮಾಡಿದಳು. ಯಾವುದೇ ಹೊಸ ಕಾನ್ಫಿಗರೇಷನ್ ಇಲ್ಲದ ಹಳೆಯ ಮೊಬೈಲ್ ಫೋನ್ ಆಕೆಯದಾಗಿತ್ತು. ತನ್ನ ಎಲ್ಲಾ ಕೆಲಸ ಮುಗಿದ ಮೇಲೆ ಮತ್ತೆ ಫೋನ ಸ್ವಿಚ್ ಆನ್ ಮಾಡಿದ ಆಕೆ ಸೈಲೆಂಟ್ ಮೋಡಿಗೆ ಹಾಕಿ ಬಿಟ್ಟಳು. ತನ್ನ ದೈನಂದಿನ ಎಲ್ಲ ಆಗುಹೋಗುಗಳನ್ನು ಚಾಚೂ ತಪ್ಪದೇ ಗಂಡನಿಗೆ ಹೇಳುವ ಆಕೆ ಈ ವಿಷಯವನ್ನು ಕೊಂಚ ಹಿಂಜರಿಕೆಯಿಂದ ಹೇಳಲೇ ಇಲ್ಲ.

ಸುಗುಣಳ ಗಂಡ ಸುರೇಶ ಸಣ್ಣ ವ್ಯಾಪಾರಿಯಾಗಿದ್ದು ಮಧ್ಯಾಹ್ನದ ಊಟಕ್ಕೆ ಮನೆಗೆ ಬರುತ್ತಿದ್ದನು. ಊಟವಾದ ನಂತರ ಒಂದು ಗಂಟೆ ಕಾಲ ವಿಶ್ರಾಂತಿ ಪಡೆದು ಮತ್ತೆ ತನ್ನ ಕೆಲಸಕ್ಕೆ ಹೊರಟು ಹೋಗುತ್ತಿದ್ದನು. ಅಂತೆಯೇ ಅಂದು ಕೂಡ ಊಟವಾದ ಮೇಲೆ ಆತ ಕೋಣೆಗೆ ತೆರಳಿ ಮಲಗಿದನು. ತನ್ನೆಲ್ಲ ಕೆಲಸ ಮುಗಿಸಿದ ಸುಗುಣ ಕೂಡ ಕೋಣೆಗೆ ತೆರಳಿ ಮಂಚದ ಮೇಲೆ ಗಂಡನ ಪಕ್ಕ ಉರುಳಿಕೊಂಡಳು. ಇಬ್ಬರೂ ತುಸು ಹೊತ್ತು ವಿಶ್ರಾಂತಿ ಪಡೆದ ನಂತರ ಸುರೇಶ ಎದ್ದು ಮುಖ ತೊಳೆಯಲು ಹೋದರೆ ಸುಗುಣ ಆತನಿಗೆ ಚಹ ಮಾಡಲು ಇಟ್ಟು ತಾನು ಕೂಡ ಮುಖ ತೊಳೆಯಲು ಬಂದಳು. ಇಷ್ಟರಲ್ಲಾಗಲೇ ಆಕೆಯ ಮೊಬೈಲ್ ಫೋನ್ ಗುರುಗುಡಲಾರಂಭಿಸಿತು... ಮೊಬೈಲ್ ನ ಸ್ಕ್ರೀನ್ ನ ಮೇಲೆ ಮುಂಜಾನೆ ಬಂದ ನಂಬರ್ನಿಂದಲೇ ಕರೆ ಬಂದದ್ದನ್ನು ಕಂಡು ಆಕೆ ಗಾಬರಿಯಿಂದ ಫೋನ್ ಕಟ್ ಮಾಡಿದಳು. ಮುಖವನ್ನು ಟವಲ್ ನಿಂದ ಒರೆಸುತ್ತಿದ್ದ ಸುರೇಶ ಪದೇ ಪದೇ ಪತ್ನಿಯ ಮೊಬೈಲಿಗೆ ಕರೆ ಬರುತ್ತಿರುವುದನ್ನೂ ಆಕೆ ಅದನ್ನು ತುಂಡರಿಸುತ್ತಿರುವುದನ್ನು ಗಮನಿಸಿ ತುಸು ಅನುಮಾನದಿಂದಲೇ ಏನಾಯ್ತು ಎಂದು ಕೇಳಿದ. ಈಗ ಅನಿವಾರ್ಯವಾಗಿ ಸುಗುಣ ನಡೆದುದನ್ನು ಹೇಳಿದಳು.

ಕೂಡಲೇ ಸುರೇಶ ತನ್ನ ಪತ್ನಿಯ ಮೊಬೈಲ್ ನಿಂದ ಆ ನಂಬರಿಗೆ ಕರೆ ಮಾಡಿದ. ಅತ್ತ ಕರೆ ಸ್ವೀಕರಿಸಿದ ವ್ಯಕ್ತಿ "ಏನು ಸ್ವೀಟ್ ಹಾರ್ಟ್, ಎಷ್ಟೊತ್ತಿನಿಂದ ಫೋನ್ ಮಾಡ್ತಾ ಇದೀನಿ ಯಾಕೆ ರಿಸೀವ್ ಮಾಡ್ತಾ ಇಲ್ಲ" ಎಂದು ಕೇಳಿದ. ಇದನ್ನು ಕೇಳಿ ನಖಶಿಖಾಂತ ಉರಿದು ಬಿದ್ದ ಸುರೇಶ ಕರೆಯ ಆ ತುದಿಯಲ್ಲಿದ್ದ ವ್ಯಕ್ತಿಗೆ ಜೋರಾಗಿ ಗದರಿಸಿದ. ಕಕ್ಕಾಬಿಕ್ಕಿಯಾದ ಆ ವ್ಯಕ್ತಿ ಆಕೆಯೇ ನನಗೆ ಮೊದಲು ಕರೆ ಮಾಡಿದ್ದು, ಬೇಕಿದ್ರೆ ಅವರನ್ನೇ ಕೇಳಿ ಎಂದು ಹೇಳಿ ಕರೆಯನ್ನು ತುಂಡರಿಸಿದ. ಎಲ್ಲ ವಿದ್ಯಮಾನಗಳನ್ನು ನೋಡುತ್ತಿದ್ದ ಸುಗುಣ ಕೊಂಚ ಗಾಬರಿಯಾದಳು. ಸುರೇಶನ ತಲೆಯಲ್ಲಿ ಅನಾಮಧೇಯ ವ್ಯಕ್ತಿಯ ಮಾತುಗಳು ರಿಂಗಣಿಸತೊಡಗಿದವು. ಮನ ಸಂಶಯದ ಹುತ್ತಕ್ಕೆ ಎಡೆ ಮಾಡಿಕೊಟ್ಟಿತು. ಕೂಡಲೇ ಹೆಂಡತಿಯ ಫೋನ್ನಲ್ಲಿದ್ದ ಇಂದಿನ ಕಾಲ್ ಹಿಸ್ಟರಿ ತೆಗೆದು ನೋಡಿದ. ಅದರಲ್ಲಿ ಕರೆ ಪತ್ನಿಯಿಂದಲೇ ಮೊದಲು ಹೋಗಿದ್ದು ಕಂಡು ಬಂತು( ಬೆಳಿಗ್ಗೆ ಆತನ ಫೋನ್ ಬಂದಾಗ ಗಾಬರಿಯಲ್ಲಿ ಮೊದಲು ಆತನ ಕರೆ ಬಂದದ್ದನ್ನು ಸುಗುಣ ಅಳಿಸಿ ಹಾಕಿದ್ದಳಲ್ಲ!). ಅನ್ಯ ಮನಸ್ಕನಾಗಿ ಪತ್ನಿ ಕೊಟ್ಟ ಚಹಾ ಕುಡಿದು ಹೊರಬಿದ್ದ ಆತ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಇತ್ತ ದೀರ್ಘವಾದ ನಿಟ್ಟುಸಿರನ್ನು ಬಿಟ್ಟ ಸುಗುಣ ತನ್ನೆಲ್ಲ ತಲೆ ನೋವನ್ನು ಪತಿಗೆವರ್ಗಾಯಿಸಿದ್ದೇನೆಂದು ಸುಮ್ಮನಾಗಿಬಿಟ್ಟಳು. ಹ!! ಆಕೆಗೇನು ಗೊತ್ತು ಪತಿಯ ತಲೆಯಲ್ಲಿ ಸಂಶಯದ ಬೀಜ ಮೊಳಕೆ ಯೊಡೆಯುತ್ತಿದೆ ಎಂದು. ಮರುದಿನದಿಂದಲೇ ಪತ್ನಿ ಯನ್ನು ಅತ್ಯಂತ ಜಾಗರೂಕನಾಗಿ ಗಮನಿಸಲಾರಂಭಿಸಿದ ಸುರೇಶ ಆಕೆಯ ಮೊಬೈಲ್ ನ ಕಾಲ್ ಹಿಸ್ಟರಿಯನ್ನು ಪ್ರತಿದಿನವೂ ಪರೀಕ್ಷಿಸಲಾರಂಭಿಸಿದ. ಗಂಡನ ಚರ್ಯೆಯಿಂದ ತುಸು ಗೊಂದಲಗೊಂಡ ಆಕೆ ಈ ಕುರಿತು ಪ್ರಶ್ನಿಸಿದಾಗ ಯಾವಾಗಿನಿಂದ ನಿನಗೆ ಆತನೊಂದಿಗೆ ಈ ಸಂಬಂಧ ಎಂದು ಕಠೋರವಾಗಿ ಕೇಳಿಯೇಬಿಟ್ಟ. ಕಾಲ ಕೆಳಗಿನ ನೆಲವೇ ಕುಸಿದಂತಾಯಿತು ಸುಗುಣಳಿಗೆ. ಪದೇಪದೇ ಆ ದಿನ ನಡೆದುದನ್ನು ಗಂಡನಿಗೆ ಆಕೆ ಹೇಳಿದರೂ ಕೂಡ ಆತನ ಅನುಮಾನ ಕರಗಲೇ ಇಲ್ಲ. ಒಂದೇ ವಾರದಲ್ಲಿ ಬಹಳಷ್ಟು ಕುಸಿದು ಹೋದಳು ಸುಗುಣ. ಅತ್ಯಂತ ಲವಲವಿಕೆಯಿಂದ ಓಡಾಡಿ ಇಡೀ ಮನೆಯ ಎಲ್ಲ ಕೆಲಸಗಳನ್ನು ಮಾಡಿ ಪೂರೈಸುತ್ತಿದ್ದ ಸುಗುಣ ನೆರೆಹೊರೆಯವರಿಗೆಲ್ಲ ಮಾದರಿಯಾಗಿದ್ದಳು. ನೆಚ್ಚಿನ ಮಡದಿ,ಒಳ್ಳೆಯ ತಾಯಿ, ಉತ್ತಮ ಗೃಹಿಣಿ ಎಂದೆನಿಸಿಕೊಂಡಿದ್ದ ಸುಗುಣ ಕೇವಲ ಎಂಟು ದಿನಗಳಲ್ಲಿ ಪತಿಯ ಸಂಶಯಾತ್ಮಕ ನಡವಳಿಕೆಯಿಂದ ಕೊರಗಿ ಸೊರಗಿ ಹೋದಳು.. 9ನೇ ಮುಂಜಾನೆ ಪ್ರತಿದಿನದಂತೆ 5 ಗಂಟೆಗೆ ಏಳಲು ಹೋದ ಸುಗುಣಳಿಗೆ ದೇಹ ಸಹಕರಿಸಲಿಲ್ಲ. ಹಾಗೂ ಹೀಗೂ ಸಾವರಿಸಿಕೊಂಡು ನಿಧಾನವಾಗಿ ಮನೆ ಕೆಲಸಗಳನ್ನು ಪೂರೈಸಿ ಮಗಳನ್ನು ಶಾಲೆಗೆ ಕಳುಹಿಸುವ ಹೊತ್ತಿಗೆ ದಣಿದು ಹೋದ ಸುಗುಣ ಮತ್ತೊಂದು ಕೋಣೆಗೆ ತೆರಳಿ ಮಲಗಿಬಿಟ್ಟಳು. ಆಕೆಯ ಕೈಕಾಲುಗಳಲ್ಲಿನ ಶಕ್ತಿಯೇ ಸೋರಿ ಹೋದಂತಾಗಿ ಜೀವನದಲ್ಲಿ ಮೊದಲ ಬಾರಿಗೆ ನಡುಕವನ್ನು ಅನುಭವಿಸಿದಳು. ಒಂದರ್ಧ ಗಂಟೆ ಮಲಗಿದಲ್ಲಿಯೇ ತನ್ನಿಡಿ ಜೀವನವನ್ನು ಮನದ ಕನ್ನಡಿಯಲ್ಲಿ ಪುನರಾವಲೋಕಿಸಿದ ಆಕೆ ತನ್ನ ಇಂದಿನ ಸ್ಥಿತಿಗೆ ಆತಂಕಕ್ಕೀಡಾದಳು. ತನ್ನ ಬದುಕಿನ ಅಸಂಖ್ಯಾತ ಏರಿಳಿತಗಳಲ್ಲಿಯೂ ಆಕೆ ಎಂದೂ ಎದೆಗುಂದಿರಲಿಲ್ಲ. ಪತಿಯ ಅನಾರೋಗ್ಯ, ಒಬ್ಬರ ಹಿಂದೆ ಒಬ್ಬರಂತೆ ಅತ್ತೆ ಮಾವ ಮತ್ತು ಸಹೋದರನ ಸಾವು ಪದೇ ಪದೇ ಕೈ ಕೊಡುವ ಮಗಳ ಆರೋಗ್ಯ ಮನೆಯ ಜವಾಬ್ದಾರಿ ಯಾವುದಕ್ಕೂ ಆಕೆ ಜಗ್ಗದೆ ತನ್ನೊಂದಿಗೆ ಸದಾ ದೇವರಿದ್ದಾನೆ ಎಂಬ ಏಕೈಕ ನಂಬಿಕೆಯಿಂದ ಬದುಕು ಸಾಗಿಸುತ್ತಿದ್ದಳು.

ಬಹಳ ಹೊತ್ತು ಯೋಚಿಸಿದ ಆಕೆ ನೇರ ಗಂಡನ ಬಳಿಗೆ ನಡೆದು ಬಂದು ಆತನ ಎದುರಿಗೆ ಕುಳಿತಳು. ಯಾವುದೋ ಕಡತವನ್ನು ಕೈಯಲ್ಲಿ ಹಿಡಿದು ಕುಳಿತಿದ್ದ ಸುರೇಶ ತನ್ನ ಮುಂದಿನ ಸೋಫಾದಲ್ಲಿ ಕುಳಿತಿದ್ದ ಪತ್ನಿಯನ್ನು ತಲೆಯೆತ್ತಿ ನೋಡಿ ಏನು ಎಂಬಂತೆ ಪ್ರಶ್ನಿಸಿದ. ಗಂಟಲು ಬಿಗಿದು ಬಂದರೂ ಬಿಡದೆ ನಡೆದಿರುವುದೆಲ್ಲವನ್ನು ನಾನು ಹೇಳಿಯಾಗಿದೆ. ನಾನೆಂದೂ ಇಷ್ಟು ಅಸಹಾಯಕಳಾಗಿರಲಿಲ್ಲ, ನನ್ನ ದೇಹದಲ್ಲಿ ಶಕ್ತಿಯೇ ಇಲ್ಲದಂತಾಗಿದೆ, ಮನಸ್ಸು ಖಿನ್ನತೆಯತ್ತ ಜಾರುತ್ತಿದೆ, ಇನ್ನು ನನ್ನಿಂದ ಸಹಿಸಲು ಸಾಧ್ಯವಿಲ್ಲ ಇನ್ನೂ ನಿಮಗೆ ಅನುಮಾನವಿದ್ದರೆ ನನಗೆ ವಿಚ್ಛೇದನ ನೀಡಿಬಿಡಿ ನನ್ನ ಬದುಕನ್ನು ನಾನು ಹೇಗಾದರೂ ಕಟ್ಟಿಕೊಳ್ಳುತ್ತೇನೆ ಎಂದು ದೃಢವಾಗಿ ಹೇಳಿ ಕೋಣೆಗೆ ನಡೆದಳು.

ಅಂದು ಮಧ್ಯಾಹ್ನ ಮನೆಗೆ ಊಟಕ್ಕೆ ಬಂದ ಸುರೇಶ ಆ ವ್ಯಕ್ತಿಯ ನಂಬರಿಗೆ ಕರೆ ಮಾಡಿ ಸ್ಪೀಕರ್ಗೆ ಹಾಕಿ ಪತ್ನಿಗೆ ಮಾತನಾಡಲು ಹೇಳಿದ.... ತಾನು ಗಾರ್ಮೆಂಟ್ ಫ್ಯಾಕ್ಟರಿ ಮ್ಯಾನೇಜರ್ ರಾಘು ಎಂದು ಹೇಳಿಕೊಂಡಿದ್ದ ಆ ವ್ಯಕ್ತಿ ತನ್ನನ್ನು ತಾನು ಬಚಾವ್ ಮಾಡಿಕೊಳ್ಳಲು ಸುಗುಣಳೆ ಕರೆ ಮಾಡಿದ್ದು ಎಂದು ಮತ್ತೆ ಮತ್ತೆ ಒತ್ತಿ ಹೇಳಿದ. ಇದೀಗ ಸುರೇಶ ಜೋರಾಗಿ ಆತನನ್ನು ಗದರಿಸಿ ಮತ್ತೊಮ್ಮೆ ಹೀಗೆ ಕರೆ ಮಾಡಿದರೆ ಪೊಲೀಸರಿಗೆ ದೂರು ನೀಡುವುದಾಗಿ ಹೆದರಿಸಿ ಕರೆಯನ್ನು ತುಂಡರಿಸಿದ. ಆತನ ಅನುಮಾನ ನಿರಾಧಾರವೆಂದು ತೋಚಿದರೂ ಆಗಾಗ ಪತ್ನಿಗೆ ಮಾತಿನಲ್ಲಿಯೇ ಕುಟುಕುತ್ತಿದ್ದ ಸುರೇಶ. ಆಗ ಸುಗುಣ ಎದುರುತ್ತರ ಕೊಡದೆ ಬಾಯಿಗೆ ಹೊಲಿಗೆ ಹಾಕಿಕೊಂಡು ಬಿಡುತ್ತಿದ್ದಳು.

ಮುಂದಿನ ಕೆಲ ತಿಂಗಳಲ್ಲಿ ರಜೆಗೆ ಬಂದ ಸುರೇಶನ ಸೋದರ ಸಂಬಂಧಿ ಸುಧಾ ಇಳಿ ಮಧ್ಯಾಹ್ನದ ಹೊತ್ತಿನಲ್ಲಿ ಹಾಲ್ನಲ್ಲಿ ಕುಳಿತು ಟಿವಿ ನೋಡುತ್ತಿದ್ದಳು. ಅಲ್ಲಿಯೇ ತುಸು ದೂರದಲ್ಲಿ ಸುಗುಣ ಕಸ ಗುಡಿಸುತ್ತಿದ್ದಾಗ ಸುಧಾಳ ಮೊಬೈಲಿಗೆ ಅನಾಮಧೇಯ ಕರೆಯೊಂದು ಬಂದಿತು. ಅಲ್ಲಿಯೇ ಆಕೆಯೊಂದಿಗೆ ಕುಳಿತು ಟಿವಿ ವೀಕ್ಷಿಸುತ್ತಿದ್ದ ತನ್ನ ಚಿಕ್ಕಮ್ಮನಿಗೆ ಕಳೆದ ಕೆಲ ದಿನಗಳಿಂದ ತನಗೆ ಕರೆ ಮಾಡಿ ತೊಂದರೆ ಕೊಡುತ್ತಿರುವ ಅನಾಮಧೇಯ ವ್ಯಕ್ತಿಯ ವಿಷಯವನ್ನು ಸುಧಾ ಹೇಳಿದಳು. ಚಿಕ್ಕಮ್ಮನ ಸಲಹೆಯಂತೆ ಕರೆಯನ್ನು ಸ್ವೀಕರಿಸಿದ ಸುಧಾ ಅತ್ತ ಕಡೆಯಿಂದ ಮಾತನಾಡುತ್ತಿರುವವ ಈ ಹಿಂದೆ ಕರೆ ಮಾಡಿ ಕಾಡಿಸಿದವನೇ ಎಂದು ಅರಿವಾದೊಡನೆ ಜೋರಾದ ಧ್ವನಿಯಲ್ಲಿ ಯಾಕಲೇ ಹ*** ಭಾ** ಹೊಟ್ಟೆಗೆ ಏನ್ ತಿಂತೀ... ಮನ್ಯಾಗ ಇರೋ ಹೆಣ್ಣುಮಕ್ಕಳಿಗೆ ಫೋನ್ ಮಾಡಿ ಜೀವ ತಿಂತೀಯಾ ಎಂದು ಪಕ್ಕಾ ಗಾಂವಟಿ ಭಾಷೆಯಲ್ಲಿ ಜೋರಾಗಿ ಬುಸುಗುಡುತ್ತಾ ಹೇಳಿದಾಗ ಅತ್ತಣ ಕರೆ ತನ್ನಿಂತಾನೇ ತುಂಡರಿಸಿತ್ತು. ಇದೆಲ್ಲವನ್ನು ಗಮನಿಸುತ್ತಿದ್ದ ಸುಗುಣ ಅಯ್ಯೋ!ನಾನೆಷ್ಟು ಪುಕ್ಕಲು, ಇವರೆಲ್ಲಾ ಅದೆಷ್ಟು ಸಲೀಸಾಗಿ ತಮ್ಮ ತೊಂದರೆಗಳನ್ನು ನಿವಾರಿಸಿಕೊಳ್ಳುತ್ತಾರೆ... ನಾನ್ಯಾಕೆ ಅಷ್ಟು ಭಯಪಟ್ಟೆ ಎಂದು ತನ್ನನ್ನು ತಾನೇ ಹಳಿದುಕೊಂಡಳು.

ಇದಾಗಿ ಮತ್ತೆರಡು ವರ್ಷಗಳೇ ಕಳೆದು ಹೋದವು. ಕೆಲ ದಿನಗಳ ಹಿಂದೆ ತಂದೆಯನ್ನು ಕಳೆದುಕೊಂಡ ಸುಗುಣ ತಾಯಿಯ ಮನೆಯಲ್ಲಿದ್ದಳು. ಮಧ್ಯಾಹ್ನ ಊಟದ ಸಮಯವಾಗಿದ್ದು ಎಲ್ಲರೊಂದಿಗೆ ಕುಳಿತು ಊಟ ಮಾಡಿ ಹೊರಬಂದ ಸುಗುಣಳ ಫೋನಿಗೆ ಅನಾಮಧೇಯ ನಂಬರ್ ನಿಂದ ಕರೆ ಬರುತ್ತಿತ್ತು... ಕರೆಯನ್ನು ಸ್ವೀಕರಿಸಿ ಕಿವಿಗಿಟ್ಟುಕೊಂಡು ಇನ್ನೇನು ಹಲೋ ಎಂದು ಹೇಳಬೇಕು "ನಾನು ಕಣ್ರೀ... ಗಾರ್ಮೆಂಟ್ ಫ್ಯಾಕ್ಟರಿ ರಾಘು" ಎಂದು ಅತ್ತ ಕಡೆಯಿಂದ ದನಿ ಬರುತ್ತಲೇ ಮೈಯೆಲ್ಲಾ ಉರಿದು ಹೋದಂತಾಯಿತು ಸುಗುಣಳಿಗೆ. ಕೂಡಲೇ ಆಕೆ ಈ ಹಿಂದೆ ತನ್ನ ನಾದಿನಿ ಸುಧಾ ಹೇಳಿದಂತೆ ಯಾಕಲೇ ಹ** ಭಾ** ನಿನಗ್ ಅಕ್ಕ ತಂಗಿ ಇಲ್ಲೇನು??ಇನ್ನೊಮ್ಮೆ ಫೋನ್ ಮಾಡಿದರೆ ಚಪ್ಪಲಿ ತಗೊಂಡ್ ಹೊಡಿತೀನಿ ಎಂದು ಜೋರಾಗಿ ಹೇಳಿದಾಗ ಅತ್ತಣ ಫೋನ್ ಕರೆ ತುಂಡರಿಸಿತ್ತು. ಜೋರಾಗಿ ಹೊಡೆದುಕೊಳ್ಳುತ್ತಿದ್ದ ಹೃದಯವನ್ನು ಸಂಭಾಳಿಸಿಕೊಂಡು ನಿಧಾನವಾಗಿ ಮಂಚದ ಮೇಲೊರಗಿದ ಸುಗುಣಳ ಕಣ್ಣಲ್ಲಿ ನೀರ ಧಾರೆಯಿದ್ದರೂ ಮನದಲ್ಲಿ ಇನ್ನಿಲ್ಲದ ನೆಮ್ಮದಿಯನ್ನು ಅನುಭವಿಸಿದಳು.

(ಸ್ನೇಹಿತರೇ ಬಹಳಷ್ಟು ಹೆಣ್ಣು ಮಕ್ಕಳ (ಗಂಡು ಮಕ್ಕಳಿಗೂ ಕೂಡ ಬರಬಹುದು) ಜೀವನದಲ್ಲಿ ಇಂತಹ ಅನಾಮಧೇಯ ಕರೆಗಳು ಬರುತ್ತವೆ, ವಿಕೃತ ಮನಸ್ಸಿನ, ಮಾಡಲು ಕೆಲಸವಿಲ್ಲದ ಬಹುತೇಕ ಜನ ಬೇರೆ ಬೇರೆ ನಂಬರುಗಳಿಗೆ ಈ ರೀತಿ ಕರೆಗಳನ್ನು ಮಾಡಿ ತಮ್ಮ ತೆವಲು ತೀರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ಅದಕ್ಕೆ ಬಲಿಯಾಗುವವರು ನಮ್ಮ ಮನೆಯ ತಾಯಿ ಪತ್ನಿ ಸೋದರಿ ಮುಂತಾದ ಹೆಣ್ಣು ಮಕ್ಕಳು. ಪೂರ್ವಾಪರ ವಿಚಾರಿಸದೆ ನಿಮ್ಮ ಮನೆಯ ಹೆಣ್ಣು ಮಕ್ಕಳನ್ನು ಅನುಮಾನಿಸಿ ಅವಮಾನಿಸಬೇಡಿ)

# ನರೇಂದ್ರ ಮೋದಿಯವರ ಅಭಿವೃದ್ಧಿ ಕನಸುಗಳು ನನಸಾಗಲಿ



■ **ಹಂಪಿ ಟೈಮ್ಸ್ ಕೊಟ್ಟೂರು**

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತ ರಾಷ್ಟ್ರದಲ್ಲಿ ದಾಖಲೆಯಲ್ಲಿ ಮೂರನೇ ಬಾರಿ ಪ್ರಧಾನಿ ಆಗುತ್ತಿರುವ ನರೇಂದ್ರ ಮೋದಿ ಅವರಿಗೆ ಶ್ರೀ ಉಜ್ಜಿನಿ ಸದ್ಧರ್ಮ ಪೀಠದ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಅಭಿನಂದನೆ ಸಲ್ಲಿಸಿ, ಆಶೀರ್ವಚನ ನೀಡಿದರು.

ಶನಿವಾರ ವೀಡಿಯೋ ಮೂಲಕ ಆಶೀರ್ವಚನ ಮಾಡಿದ ಜಗದ್ಗುರುಗಳು, ಭಾರತ ದೇಶ ಸನಾತವಾದ ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರುವಂತಹ ರಾಷ್ಟ್ರ, ಹಲವು ಮತ, ಧರ್ಮ, ಜಾತಿ, ಜನಾಂಗಗಳು ಹೊಂದಿರುವ ರಾಷ್ಟ್ರ. ವಿವಿಧತೆಯಲ್ಲಿ ಏಕತೆಯನ್ನು, ಅನೇಕತೆಯಲ್ಲಿ ಐಕ್ಯತೆಯನ್ನು ಕಾಣುವಂತಹ ರಾಷ್ಟ್ರ ಭಾರತ, ಇಂತಹ ಬಹುವಿದ ಆರಾಧನೆಯ, ಸಂಸ್ಕೃತಿಯ ದೇಶದಲ್ಲಿ ನರೇಂದ್ರ ಮೋದಿಯವರು ಮೂರನೇ ಅವಧಿಗೆ ಆಡಳಿತದ ಚುಕ್ಕಾಣಿ ಹಿಡಿಯುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನರೇಂದ್ರ ಮೋದಿಯವರು ದೇಶದ ಸರ್ವತೋಮುಖ ಅಭಿವೃದ್ಧಿಗೆ ಅನೇಕ ಕನಸುಗಳನ್ನು ಹೊಂದಿದವರು ಮೂರನೇ ಅವಧಿಗೆ ಅವರ ಎಲ್ಲಾ ಕನಸುಗಳು ಈಡೇರಿವಂತಾಗಲಿ, ಅದಕ್ಕೆ ಬೇಕಾದಂತಹ ಎಲ್ಲಾ ಜಂಗಾ ಬಲವನ್ನ, ಆತ್ಮ ಬಲವನ್ನ, ಮನೋ ಬಲವನ್ನ ಭಗವಂತ ನೀಡಲಿ ಎಂದು ಆಶೀರ್ವದಿಸಿದರು.
ಆಯುಷ್ಯ, ಆರೋಗ್ಯ ಭಾಗ್ಯಗಳು ಪ್ರಾಪ್ತಿಯಾಗಲಿ ಶ್ರೀ ಪಂಚಾಚಾರ್ಯರು ಸದಾ ಅವರಿಗೆ ಸನ್ಮಂಗಳ ಉಂಟು ಮಾಡಲಿ ಎಂದು ಶುಭ ಹಾರೈಸಿ, ಅಭಿನಂದನೆ ಸಲ್ಲಿಸಿದರು.



## ಕವಿ ಮನಸು

### ಹೊಣೆ ಹೊತ್ತುಕೊ...

ಏಕಾಂತ ದೊರೆತಿರಲು ಈ ದೂರವೇತಕ್ಕೆ
ಏ ಕಾಂತ ಬಳಿಬಂದು ಬಳಸು ನಡುವ
ಎಂದೀಗ ಕರೆಯಿತ್ತೆ ಸನ್ನೆಯಲೆ ನನಗೀಗ
ಹೊಣೆಹೊತ್ತುಕೊಳ್ಳುವೆನು ರಮಿಸೆ ಮನವ

ಆ ನಂದ ಕಂದನನು ಕಂಡಾಗ ಆ ರಾಧೆ
ಆನಂದ ಪಡುತಿದ್ದ ಕಥೆಯ ಕೇಳು
ಅವಳಂತೆ ಒಲವಿಂದ ಹೂನಗುವ ನೀ ಚೆಲ್ಲು
ಹೊಣೆಹೊತ್ತುಕೊಳ್ಳುವೆನು ನಗುವ ತರಲು

ಆ ರತಿಯೆ ಧರೆಗಿಳಿದು ಬಂದಂತೆ ನನ್ನೆದುರು
ಆರತಿಯ ಬೆಳಗುವೆನು ಮನದಲಿರಿಸಿ
ನಿನಗೀವ ವಚನವಿದು ನೀನೆನ್ನ ಮನದನ್ನೆ
ಹೊಣೆಹೊತ್ತುಕೊಳ್ಳುವೆನು ಮನದ ಅರಸಿ

ಬಾ ನಲ್ಲೆ ಬಾ ಬಳಿಗೆ ಕಾದಿರುವೆ ನಿನಗಾಗಿ
ಬಾನಲ್ಲೇ ಮುಗಿಸೋಣ ಮಧುಚಂದ್ರವಾ
ಮನಕೀಗ ಮೂಡಿಹುದು ಉತ್ಸಾಹ ರೆಕ್ಕೆಗಳು
ಹೊಣೆಹೊತ್ತುಕೊಳ್ಳುವೆನು ಬಿಡು
ಚಿಂತೆಯಾ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಸಂಭ್ರಮ

ಚಿನ್ನದ ತಟ್ಟೆಲಿ ಅನ್ನವ ತುಂಬಿದೆ
ಉಣ್ಣುವ ಬಾಯಿಗೆ ಸಂಭ್ರಮವೊ
ರನ್ನದ ನೆಲಕೆ ಸೂರ್ಯನ ಬೆಳಕು
ಸ್ವರ್ಗವೇ ಕರೆದು ಅಪ್ಪುವುದು
ಚೆಲುವಿನ ಮಡಿಕೆಗೆ ಅಕ್ಷರ ತುಂಬಿ
ಜ್ಞಾನಮೃತವೇ ಹರಿತಿಹುದು
ಕಣ್ ಮನಸೆಳೆಯಲು ಸಾಧನೆಯೊಂದು
ಕಾಲವೇ ಸ್ವರ್ಣ ಭವಿಷ್ಯಕ್ಕೆ ಕರೆವುಹುದು
ಬೆಳಗು ಜಾವದ ಸುಂದರ ಕನಸಲಿ
ಕಣ್ಣಿಗೆ ಕಟ್ಟಿದೆ ಹೆಗ್ಗುರಿಯು
ಕನ್ನಡಿ ಒಳಗೆ ಬಿಂಬವು ಮೂಡಿ
ಜೀವ ಜೀವನದ ಮುನ್ನುಡಿಯು
ಪಯಣದ ಹಾದಿಲಿ ತಿರುವುದಾಟಲು
ಬದುಕಿನ ಹಡಗು ಸಾಗುತ್ತಿದೆ
ಹಿರಿತನ ಸಾಲಲಿ ಸಿರಿತನ ಮನದಲಿ
ಹೊಸತನ ನಗುವೇ ಚಿಮ್ಮುತ್ತಿದೆ
ಗುರುವಿನ ಹಂಬಲ ಹಿರಿಯರ ಬೆಂಬಲ
ಆಸರೆಯಾಗಿ ಜೀವನ ಉದ್ದಕ್ಕೂ
ಸದಾ ಕತ್ತಲೆ, ಬದುಕನ್ನು ಬೆಳಗುವುದು.

– ಜೆ.ಯರಿಸ್ವಾಮಿ ಸಂಕ್ಲಾಪುರ

### ಬಿಡು ದಾರಿ ಗೆಳೆಯ



ದಟ್ಟನೆಯ ಕಾಡಿನಲಿ
ದುತ್ತೆಂದು ನೀ ಬಂದಿರುವೆ
ಹೊತ್ತಾಗಿದೆ ಬೀಡು ಗೆಳೆಯ
ಮನೆಗೆ ನಾ ಹೋಗುವೆ

ತಲೆ ಸ್ನಾನ ಮಾಡಿಕೊಂಡು
ಮಡಿಯನ್ನು ಉಟ್ಟುಕೊಂಡು
ದೇವರ ಪೂಜೆಗೆ ಹೂವನೋಯ್ಯಲು
ಬಂದಿರುವೆ ಬಿಡು ಗೆಳೆಯ ಮನೆಗೆ
ಹೋಗಲು

ಸರಸಕ್ಕೆ ಸಮಯವಿದು ಅಲ್ಲ
ವಿರಸಕ್ಕೆ ಕಾರಣ ಬೇಕಿಲ್ಲ
ಪುರುಸೊತ್ತು ಎನಗಿಲ್ಲ
ಬಿಡು ದಾರಿ ಗೆಳೆಯ ಮನೆಗೆ ಹೋಗಲು

ಶುಭ ಘಳಿಗೆ ಮುಂದಿಹುದು
ಹಿರಿಯರ ಅಪ್ಪಣೆ ಬೇಕಿಹುದು
ತಾಳಿ ಕಟ್ಟುವ ಮೊದಲು ತರವಲ್ಲ
ಈ ಸರಸ ತಪ್ಪಾಗುವುದು ಬೇಡ ನಮ್ಮಿಂದ
ಬಿಡು ಹಾದಿ ಗೆಳೆಯ ನಾ ಮನೆಗೆ
ಹೋಗಲು

– ಕೆ ಎಂ ಬಸವರಾಜ ಹೊಸಪೇಟೆ

ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
91082 26938
90368 65666
Near Honda Showroom, Hosapete-583201

## ಅಂಜನ



ಮುಂದುವರಿದ ಭಾಗ........

ಅಲ್ಲಿಗೆ ನಾನು ಸಂಪೂರ್ಣ ಸಿಕ್ಕಿ ಹಾಕಿಕೊಂಡೆ ಅನ್ನಿಸಿತು, ಏಕಂದರೆ ಈ ಹೊಲದಲ್ಲಿ ಜಲ ಇರುವ ಒಂದು ಜಾಗ ತೋರಿಸು ಅಂದಿದ್ದರೆ ನಾನು ಉಳಕೊಳ್ಳತಿದ್ದನೇನೊ, ಯಾರಿಗೆ ಕಾಣುತ್ತೆ ಭೂಮಿ ಒಳಗ ಎಲ್ಲಿ ನೀರೈತಿ ಎಲ್ಲಿ ಕಲ್ಲು ಐತಿ, ನಾನು ಏನು ಹೇಳಿದ್ದರೂ ಸರಿನೇ ಆಗತಿತ್ತು. ಆದರೆ ಹಳೆ ಬೋರ್ವೆಲ್ಲ ತೋರಿಸು ಅಂದರೆ. ಏನು ಮಾಡೋದು? ಇಲ್ಲಿಯವರೆಗೆ ನನಗೆ ಸಿಗುತ್ತಿದ್ದ ಆದರ ಗೌರವಗಳು ಇಲ್ಲಿಗೆ ಕೊನೆ ಎನಿಸಿದಂತಾಯಿತು. ಎಲ್ಲಿ ಅಂತ ಹುಡುಕುವುದು ಆ ಹಳೆ ಬೋರ್ವೆಲ್ಲ ಪಾಯಿಂಟ್ ಜಾಗವನ್ನು. ಕೊನೆ ಪಕ್ಷ ಹೊಲ ಕಾಲಿ ಇದ್ದರ ಅಲ್ಲಿ ಇಲ್ಲಿ ದೃಷ್ಠಿ ಹರಿಬಿಟ್ರ ಸಿಗುತಿತ್ತೇನೊ. ಇದು ನೋಡಿದರ ಮೊಣಕಾಲು ಎತ್ತರದ ಸೇಂಗಾ ಬೆಳೆಯಲ್ಲಿ ನೆಲನೂ ಕಾಣುತ್ತಿಲ್ಲ.

ಹಾಗೆ ಮುಂದೆ ಹೋಗಿ ನೆಪಕ್ಕೆ ಮಾತ್ರ ಆ ಡಬ್ಬಿಯನ್ನು ನೋಡುತ್ತಾ ಅಲ್ಲಿ ಎಲ್ಲಿಯಾದರು ಕಾಣುತ್ತೇನೊ ಎಂದು ಹೊಲದ ನಾಲ್ಕು ಮೂಲೆಗಳಿಗೆ ಕಣ್ಣು ಹಾಯಿಸಿದೆ, ಊಂ...ಉಂ ಏನು ಕಾಣಿಸಿಲಿಲ್ಲ.

ಇಲ್ಲಿಗೆ ನನ್ನ ಆಟ ಮುಗೀತು ಇನ್ನು ನನ್ನ ಸುಳ್ಳನ್ನು ಯಾರು ನಂಬುವುದಿಲ್ಲ ಎನ್ನುವುದು ಪಕ್ಕ ಆಯಿತು ನೋಡಿ. ಸರಿ ಸುಮಾರು ಅರ್ದ ಗಂಟೆ ಸುತ್ತಿ ಸುತ್ತಿ ಅಲ್ಲೆ ಒಂದು ಉಣಸೆ ಮರದ ಬಳಿ ಬಂದು ನಿಂತೆ. ಒಳ ಒಳಗ ಮನಸ್ಸು ಹೇಳತಿತ್ತು ಮಗನೆ ನಿನಗೆ ಬೇಕಿತ್ತಾ ಇದು, ನಿನ್ನ ಸುಳ್ಳಿನ ಗಂಟು ಮೂಟೆ ಕಟ್ಟು, ಇವತ್ತು ನಿನ್ನ ಬಣ್ಣ ಬಯಲಾಗೊ ಸಮಯ ಬಂದೇ ಬಿಡ್ತು ಅನ್ನುವಾಗ, ನನ್ನ ಬಗ್ಗೆ ನನಗೆ ಮುಜುಗರ, ಒಂದು ರೀತಿಯ ಅಸಹ್ಯ ಅನಿಸಿಕತ್ತಿತ್ತು.

ಯಾರೋ ಏನೋ ಅಂದರು ಅಂತ ಅಥವಾ ಒಂದು ಸಲ ಮಜ ತೆಗೆದುಕೊಳ್ಳೋದೆ ಅಂದುಕೊಂಡು ಆ ಸಮಯಕ್ಕೆ ಅಂಗಡಿಯಲ್ಲಿ ಹೇಳಿದ ಒಂದು ಸುಳ್ಳು ಈಗ ನನ್ನ ನಡು ಬೀದಿಯಲ್ಲಿ ಬೆತ್ತಲೆ ಮಾಡ್ಲಿಕ್ಕೆ ಸಿದ್ದವಾಗಿತ್ತು. ಮನಸ್ಸಿನಲ್ಲೆ ನಿರ್ದಾರ ಮಾಡಿದೆ, ಸುಳ್ಳು ಹೇಳಬಾರದು, ಹೇಳಬಾರದಿತ್ತು ಕೂಡ ಆದರೆ ಈಗ ಆ ಸುಳ್ಳನ್ನು ಮುಚ್ಚಿ ಹಾಕಲಿಕ್ಕೆ ಇನ್ನೊಂದು ಸುಳ್ಳು ಹೇಳೋದು ಬೇಡ ಸತ್ಯವನ್ನು ಹೇಳಿಬಿಡೋಣ ಅಂದುಕೊಂಡು, ಯಜಮಾನ ನನಗೇನು ಕಾಣ್ತಿಲ್ಲ, ಮೊದಲಿನಿಂದಲೂ ಏನು ಕಾಣ್ತಿದ್ದಿಲ್ಲ ನೀವೆಲ್ಲ ಸುಮ್ಮನೆ ನನಗೆ ತಿಳಿಯುತ್ತೆ ಅಂದುಕೊಂಡು ಈ ಹಂತದವರೆಗೆ ತಂದುಬಿಟ್ಟೀರಿ ಎಂದು ಹೇಳಲಿಕ್ಕೆ ಬಾಯಿ ತೆಗೆಯೊ ಅಷ್ಟೊತ್ತಿಗೆ ಸರಿಯಾಗಿ ಶಬ್ಬಾಷ್ ಮಗನೆ ಸರಿಯಾಗಿ ಹಳೆ ಬೋರ್ವೆಲ್ ಜಾಗದ ಮೇಲೀನೆ ನಿಂತಿ ನೋಡು! ಎಂದ ಕುಶರಾಜಪ್ಪನ ಮಾತು ಒಣಗಿ ಹೋದ ನನ್ನ ಗಂಟಲಿಗೆ ಎಳೆ ನೀರು ಸುರಿದಾಂಗ ಆಯ್ತು. ಎಲ್ಲರು ಚಪ್ಪಾಳೆ ತಟ್ಟಿ ಹೌದೌದು ಈ ಹುಡುಗನಿಗೆ ಚನ್ನಾಗಿ ಗೊತ್ತಾಗುತ್ತದೆ ಎನ್ನಬೇಕೆ! ಸದ್ಯಕ್ಕೆ ಬದುಕಿದೆ ಬಡ ಜೀವ ಎಂದುಕೊಂಡು ಆ ಅಜ್ಜನ ಹತ್ತಿರ ಬಂದು ನಿಜ ಹೇಳಬೇಕು ಅನ್ನುವಷ್ಟರಲ್ಲಿ ಆ ಕಡೆಯಿಂದ ಖುಷಿಯಲ್ಲಿದ್ದ ಕುಶರಾಜಪ್ಪ ಐವತ್ತು ರುಪಾಯಿ ನೋಟು ನನ್ನ ಕಿಸೆಗೆ ತುರುಕುತ್ತ ತಮ್ಮ ನನ್ನ ಬೊರ್ವೆಲ್ಲ ಪಾಯಿಂಟ್ ನೀನೆ ತೋರಿಸಬೇಕು ಅನ್ನುತ್ತಿದ್ದರೆ, ನನ್ನ ಬಾಯಿಗೆ ಬಂದ ಸತ್ಯ ಹಾಗೆ ಹೊಟ್ಟೆಗೆ ಇಳಿಯುತು. ಇನ್ನು ಐವತ್ತು ರುಪಾಯಿ! ಇಂದಿನ ಐದುನೂರು ರುಪಾಯಿಗೆ ಸಮ, ಮಾತು ಮೌನವಾಗದೆ ಇರುತ್ತಾ?



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Hampi Times E-paper
SCAN AND READ

ಸರಿ ಹಾಗಾದರೆ ಮತ್ತೆ ನಮ್ಮ ಕೋವಿ ಎತ್ತಿಲಿಕ್ಕೆ ನಾವು ರಡಿಯಾದ್ವಿ, ಜೇಬಿನಲ್ಲಿದ್ದ ಹಣ ಮತ್ತೆ ಮಾತಾಡ್ಲಿಕ್ಕೆ ಸುರುವಾಗಿತ್ತು. ಅಲ್ಲಿ ಇಲ್ಲಿ ಸುತ್ತಾಡಿ ಅವರಿಗೆ ಅಂದು ಒಂದು ಜಲ ಮೂಲವನ್ನು ತೋರಿಸಿ ಮನೆಯಕಡೆ ಹೊರಟ್ವಿ. ಬಕ್ಕಣ್ದಲ್ಲಿದ್ದ ಐವತ್ತ ನೋಟು ಮತ್ತೆ ನನ್ನನ್ನು ನಿರ್ವಿಕಾರನನ್ನಾಗಿ ಮಾಡಿತ್ತು ಮುಂದೆ ಬರಬಹುದಾದ ಲೋಕ ನಿಂದನೆಗಳಿಗೆ. ಎಷ್ಟೇ ಆಗಲಿ ನಾನು ಮನುಷ್ಯ ಪೀಳ್ಳಿಯಲ್ಲವೆ.

ಈ ವಿಷಯ ನಾ ಕೇಳು ನೀ ಕೇಳು ಎನ್ನುತ್ತ ಊರಿಗಷ್ಟೆ ಅಲ್ಲದೇ ಊರಿನಾಚಿನ ಊರುಗಳಿಗೆ ಮುಟ್ಟಿತು, ಇದೇ ಉತ್ಸಾಹದಲ್ಲಿ ಕುಶರಾಜಪ್ಪ ಬೊರ್ವೆಲ್ಲ ಗಾಡಿಗೆ ಪೊನಾಯಿಸಿ ಮುಂದಿನ ಶುಭ ಗುರುವಾರ ಬೊರ್ವೆಲ್ ಕೊರೆಸಲು ಸಿದ್ದತೆ ಮಾಡಿಕೊಂಡ. ಈ ವಿಷಯ ನನಗು ಗೊತ್ತಾಯಿತು, ಸಾಲ ಶೂಲ ಮಾಡಿಕೊಂಡು ಹಣದ ಸಿದ್ದತೆಯನ್ನು ಮಾಡುತ್ತಿದ್ದ ಕುಶರಾಜಪ್ಪನನ್ನು ಕಂಡು ಮನಸ್ಸು ಮರಗುತಿತ್ತು, ಏನು ಮಾಡುವುದು ಒಂದು ವೇಳೆ ನೀರು ಬರದಿದ್ದರೆ? ಹಣ, ಸಮಯ,ಒಂದಿಡಿ ಕುಟುಂಬದ ಜೀವನದ ಗತಿ? ಹೇಳಿದರೂ ನಂಬುವ ಸ್ಥಿತಿಯಲ್ಲಿ ಅವರಿಲ್ಲ, ಹೇಳದೆ ಇರಲಿಕ್ಕೆ ನನ್ನ ಮನಸ್ಸು ಒಪ್ಪುತ್ತಿಲ್ಲ. ಇಂತಹ ಗೊಂದಲದಲ್ಲಿದ್ದ ನನಗೆ ಯಾವಾಗ ಆ ಒಂದು ವಾರ ಕಳಿಯುತ್ತದೆಯೋ ಯಾವಾಗ ಈ ವಿಚಾರ ಒಂದು ತಾತ್ವಿಕ ಕೊನೆಯನ್ನು ಕಂಡುಕೊಳ್ಳುತ್ತದೆಯೋ ಎನ್ನುವಂತಾಗಿತ್ತು.

ನಾಳೆ ಗುರುವಾರ ಕುಶರಾಜಪ್ಪನ ಮನೆಯಲ್ಲಿ ಎಲ್ಲ ಸಿದ್ದತೆ ಮಾಡಿಕೊಳ್ಳುತ್ತಿದ್ದಾರೆ ಏಕೆಂದರೆ ನನ್ನ ಪಕ್ಕದ ಓಣಿಯಲ್ಲೆ ಅವರ ಮನೆ ಇರೋದು. ಆ ರಾತ್ರಿ ನಿದ್ದೆ ಬರಲಿಲ್ಲ, ಒಮ್ಮೊಮ್ಮೆ ಅನಿಸಿತಿತ್ತು ನಾಳೆ ಆ ಗಾಡಿಯೇ ನಮ್ಮೂರಿಗೆ ಬರಬಾರದು, ಬಂದರು ಅದು ಬೋರ್ವೆಲ್ಲ ಕೊರಿಬಾರದು, ಯಾಕಾದರು ಈ ಸರಕಾರಗಳು ಬೊರ್ವೆಲ್ಲ ಕೊರೆಯುವುದನ್ನು ನಿಷೇದಿಸಬಾರದು ಎಂದು ಅನಿಸಿದ್ದು ಇದೆ. ಆಗಲೆ ಬೆಳಗಾಗಿತ್ತು ಹಾಗೆ ಬೊರ್ವೆಲ್ಲ ಗಾಡಿ ಬಂದಿರುವುದು ಗೊತ್ತಾಯಿತು, ಅರ್ದ ಊರ ಜನ ಸೇರಿದ್ದರು ಅನುಸುತ್ತೆ ಹೊಲದಲ್ಲಿ, ನಾನು ಹೊದೆ ಜನರ ಮದ್ಯೆ ನಿಂತು ಕುಶರಾಜಪ್ಪನ ಹೆಂಡತಿ ಗಂಗೆಯ ಪೂಜೆಯನ್ನು ಮಾಡಿ ಮನಸ್ಸಿನಲ್ಲೆ ಹರಕೆಯನ್ನು ಕಟ್ಟಿಕೊಳ್ಳುತ್ತಾಳೆ, ಇತ್ತ ಕುಶರಾಜಪ್ಪ ಹಣದ ಗಂಟನ್ನು ಬಗಲಲ್ಲಿ ಇಟ್ಟುಕೊಂಡು ನಮ್ಮೋರನಲ್ಲಿ ನಂದೆ ಮೊದಲ ಬೋರ್ವೆಲ್ಲ್ ಎನ್ನುತ್ತ ಎದೆ ಸೆಟಿಸಿಕೊಂಡು ತಿರುಗಾಡುತ್ತಿದ್ದ. ಇತ್ತ ಯಾಕಾದ್ರು ನಾನು ಈ ಹುಚ್ಚ ಜನರ ಮಧ್ಯ ಸೇರಿಕೊಂಡು ಹಾಳಾದೆ, ನಾನು ನನ್ನ ಶಾಲೆ ಅಂದುಕೊಂಡು ಇದ್ದಿದ್ದರೆ ಎನ್ನುವಂತೆ ನಿಂತಿದ್ದೆ.

ಪೊಜೆ ಮುಗೀತು, ಗಾಡಿಯಿಂದ ಕೆಳಗಿಳಿದ ದಡೂತಿ ಆಕಾರದ ಮನುಷ್ಯ "ಏನ್ ಅಣ್ಣಾ ಹೆಂಗ್ ಇರ್ಕಾ, ಹಣ ಇದ್ದಿಯಲ್ಲ? ಎನ್ನುತ್ತಿದ್ದಂತೆ ಕುಶರಾಜಪ್ಪ ಹಣದ ಗಂಟನ್ನು ಅವನ ಕೈಗೆ ಕೊಡುತ್ತ ಐದು ಸಾವಿರ ಇದೆ ಜೋಪಾನ ಎನ್ನುತ್ತಿದ್ದಂತೆ ಆ ಗಂಟನ್ನು ತೆಗೆದುಕೊಂಡು ಸ್ಟಾರ್ಟ್ ಪಡುಕು ರಾ ಎನ್ನುತ್ತ ಅವರ ಹುಡುಗರಿಗೆ ಆಜ್ಞೆ ಮಾಡಿ ಲಾರಿ ಹತ್ತಿ ಕುಳಿತ. ಗಜಗಾತ್ರದ ಗಾಡಿ ಉದ್ದೂದ್ದನೆಯ ಪೈಪುಗಳು ಅಡ್ಡ ಉದ್ದ ಹಿಂದೆ ಮುಂದೆ ದೊಡ್ಡ ದೋಡ್ಡ ಚಕ್ರಗಳು ಬ್ರಹ್ಮ ರಾಕ್ಷಸನಂತೆ ಓಓಓ....... ಎನ್ನುತ್ತ ಗರಗರಗರ ತಿರುಗುತ್ತ ಹೂಂಕರಿಸಿ ನೆಲ ಬಗೆಯಲು ಪ್ರಾರಂಬಿಸಿತು. ಒಂದು ಕ್ಷಣ ಆಕಾಶದೆತ್ತರಕ್ಕೆ ದೂಳೆದ್ದು ಭೂಮಿಯೆ ಅದುರಿದಂತಾಯಿತು! ನಂತರ ಒಂದೆ ರೀತಿಯಲ್ಲಿ ಒಂದಾದ ಮೇಲೆ ಒಂದು ಪೈಪುಗಳು ಜೋಡಿಸುತ್ತಾ ನೆಲದೊಳಗೆ ತಳ್ಳುತಿತ್ತು ಬರೀ ದೂಳು ದೂಳು.... ಆಗಲೆ ಹತ್ತು ಪೈಪುಗಳು ಭೂಗರ್ಭ ಸೇರಿದವು, ಅಲ್ಲೆ ಸೇರಿದ್ದ ಹಿರಿ ಕಿರಿಯರೆನ್ನದೆ ಅವರವರ ಅನುಭವ ಆದಾರದ ಮೇಲೆ ವಿಚಾರ ವಿನಿಮಯ ನೆಡೆದಿತ್ತು ಒಟ್ಟಾರೆಯಾಗಿ ಜಲದ ಮೂಲ ಇದೆ ಎನ್ನುವ ಅಭಿಪ್ರಾಯ ಬರುತಿತ್ತು. ಅದನ್ನೆಲ್ಲ ಕೇಳಿದಾಗ ನನಗೂ ಕೊಂಚ ಸಮಾದಾನ ಎನಿಸುತಿತ್ತು.

ಅದರಲ್ಲೆ ತಿಳಿದಂತ ಬಿಳಿತೆಲೆಯ ಯಜಮಾನರುಬ್ಬರು ಬೊರ್ವೆಲ್ಲ ಗಾಡಿಯ ಕೊರೆಯುತ್ತಿದ್ದ ಪಾಯಿಂಟ್ ನ ಬುಡದಿಂದ ಅಲ್ಲೆ ಬಿದ್ದಿರುವ ಮಣ್ಣಿನ ಹಿಡಿಯನ್ನು ಕೈಯಲ್ಲಿಡಿದು " ಇದರಲ್ಲಿ ಬಿಳಿ ಗೊರಸಿನಂತಹ ಕಲ್ಲಿನ ಚೂರುಗಳೆ ಹೆಚ್ಚಾಗಿರುವುದರಿಂದ ನೀರು ಇರುವುದು ಪಕ್ಕ, ಆದರೆ ಈ ಮಣ್ಣಿನ ಹಿಡಿಯಲ್ಲಿ ಕೆಲವು ಕಪ್ಪು ಬಣ್ಣದ ಕಲ್ಲಿನ ಚೂರುಗಳೂ ಇರುವುದರಿಂದ ಕೆಳಗಿರುವಂತಹ ಕಲ್ಲಿನ ಬಂಡೆಯ ಗಾತ್ರವೂ ದೊಡ್ಡದಿರಬಹುದು ಹಾಗಾಗಿ ಈ ದ್ವಡ್ಡ ಗಾತ್ರದ ಬಂಡೆಯನ್ನು ಪಾರು ಮಾಡಿದ್ದೆ ಆದರೆ ನೀರಿನ ಸಾಗರವನ್ನೆ ಕಾಣಬಹುದು" ಎಂದು ತನ್ನ ಅನುಭವದ ಆದಾರದ ಮೇಲೆ ಭವಿಷ್ಯ ನುಡಿದನು. ಆ ಬಿಳಿತೆಲೆಯ ಯಜಮಾನನ ಊಹೆ ಸರಿಯಾಗಿಯೇ ಇತ್ತು ಅನ್ನುವುದಕ್ಕೆ ಬಹಳ ಸಮಯ ಹಿಡಿಯಲಿಲ್ಲ. ಬೋರ್ವೆಲ್ಲ ಗಾಡಿಯ ಭೂಮಿ ಅಗಿಯುವ ಶಬ್ದ ನಿದಾನವಾಗಿ ಬದಲಾಗುತ್ತ ಕಲ್ಲನ್ನೆ ಕಬ್ಬಿಣದ ಹಾರಿಯಿಂದ ಕುಟ್ಟುವಂತಹ ಶಬ್ದ ಟಂಣ್ ... ಟಂಣ್ ..ಣ್ ಣ್ ಎನ್ನತೊಡಗಿತು. ಎಲ್ಲರೂ ಬಾಯಲ್ಲೂ ಒಂದೇ ಮಾತು ಭೂಮಿಯ ಆಳದಲ್ಲಿ ಕಲ್ಲಿನ ಬಂಡೆ ಸಿಕ್ಕಿದೆ ಎಂದರೆ ಅದರ ಕೆಳಗಡೆ ನೀರಿರುವುದು ಖಾತ್ರಿ ಅದು ಕೂಡ ಸಿಹಿ ನೀರಿನ ಸೆಲೆಯೇ ಆಗಿರುತ್ತದೆ ಎಂದು ತಮ್ಮ ತಮ್ಮಲ್ಲೇ ಮಾತಾನಾಡಿಕೊಳ್ಳುತ್ತಿರುವುದನ್ನು ಕೇಳಿಸಿಕೊಳ್ಳುತ್ತಿದ್ದ ನನಗೆ, ದೇವರೆ ಹೇಗಾದರು ಮಾಡಿ ನೀರು ಬರುವ ಹಾಗೆ ಆಗಲಿ ಎಂದು ಬೇಡಿಕೊಳ್ಳುವುದೊಂದೆ ಮಾರ್ಗವಾಗಿತ್ತು.

ಪುಟಿದೇಳುತ್ತಿದ್ದ ದೂಳು, ಕಲ್ಲಿನ ಚೂರುಗಳು, ಕುಂಯೋ... ಎನ್ನುತ್ತಿದ್ದ ಬೋರ್ವೆಲ್ಲು ಗಾಡಿ, ಆಸೆಗಣ್ಣಿನಿಂದ ನೀರು ಯಾವಾಗ ಬರುತ್ತದೆ ಎಂದು ಕಾಯಿತ್ತಿದ್ದ ಜನರು, ನೀರಿನ ನಿರೀಕ್ಷೆಯಲ್ಲಿದ್ದ ಕುಶರಾಜಪ್ಪನಿಗಂತೂ ನುಂಗಲು ಗಂಟಲಿನಲ್ಲಿ ಒಂದು ಹನಿ ಉಗಳು ಕೂಡ ಇರಲಿಲ್ಲ. ಅಷ್ಟರಲ್ಲೆ ಕೆಳಗಿಳಿದು ಬಂದ ಆ ಗಾಡಿಯ ಯಜಮಾನ "ಅನ್ನ ಇನ್ನು ಒಂದು ಪೈಪು ಇರ್ಕಣ್ಣ, ಇನ್ನು ಎಷ್ಟು ಆಳಕ್ಕೆ ಬೆಕು? ಹಣ ಜೋಡಿಸಿಕೊಳ್ಳಿ" ಎಂದವನೆ ಕಿವಿಯಲ್ಲಿ ಬೆರಳು ಹಾಕಿಕೊಂಡು ಕೆರದುಕೊಳ್ಳುತ್ತ ಗಾಡಿಯ ಕೆಳಗಿದ್ದ ನೆರಳಿನಲ್ಲಿ ಮಲಗಿಕೊಂಡ. ಇದನ್ನು ಕಂಡ ಕುಶರಾಜಪ್ಪನಿಗೆ ಕರಳು ಕಿವಿಚಿದಂತಾಯಿತು, ಯಾಕಾದರೂ ಈ ಹುಡಗನ ಮಾತನ್ನು ನಂಬಿದೆ ಎನ್ನುತ್ತ ತಲೆಯ ಮೇಲೆ ಕೈ ಹೊತ್ತು ಅಲ್ಲೆ ಕುಸುದು ಬಿಟ್ಟ.

ಈಗಿನ ಕಾಲದಲ್ಲಿ ಇವೆಲ್ಲ ನೆಡೆಯೋದಿಲ್ಲ ನೋಡು, ಬೇಕಿದ್ದರೆ ಟೌನನಿಂದ ಜಲ ಮೂಲ ಹುಡುಕುವವರನ್ನು ಕರೆಸಬೇಕು ಎನ್ನುತ್ತಿದ್ದ ಜನರ ಮಾತು ಇನ್ನೊಂದು ಕಡೆಗೆ. ನನಗಂತು ಯಾಕಾದರೂ ಬೇಕಿತ್ತಪ್ಪ ಇದೆಲ್ಲ ಅಂದುಕೊಂಡು ಕೈ ಕೈ ಹಿಸಿಕಿಕೊಳ್ಳುತ್ತಾ ಜನರ ಮಧ್ಯ ತೆಪ್ಪಗೆ ಕೊತಿದ್ದೆ.

ಇದ್ದಕಿದ್ದಂತೆ ಅದೆಲ್ಲಿಂದ ಬಂತೋ ಕಾಣಲಿಲ್ಲ ಒಮ್ಮಿಂದೊಮ್ಮೆಲೆ ಆಕಾಶದೆತ್ತರಕ್ಕೆ ಚಿಮ್ಮಿದ ಬಿಳಿಯ ರೇಖೆಯೊಂದು ಬಾನೆತ್ತರದಲ್ಲಿ ಟಿಸಿಲೊಡೆದು, ಸೂರ್ಯನ ಕಿರಣಗಳನ್ನೆ ಮರೆಮಾಚಿ ಸುರಿವ ಮಳೆಯಂತೆ ಟಪ ಟಪ ಟಪ ಸದ್ದು ಮಾಡುತ್ತ ನೀರಿನ ಹನಿಗಳು ಬೀಳುತ್ತಿದ್ದರೆ! ಒಂದು ಕ್ಷಣ ಜನರು ತಮ್ಮ ತಮ್ಮ ಕೈ ಮೈ ಮುಖಗಳನ್ನು ಮುಟ್ಟಿನೋಡಿಕೊಳ್ಳುತ್ತ ನೀರು...! ನೀರೂ....! ಗಂಗೆ ಸಿಕ್ಕಳು ಉದ್ಭವಿಸಿದಳು ಎನ್ನುತ್ತ ಕುಣಿದಾಡುತ್ತಿದ್ದನ್ನು ಕಂಡು, ಇದೇನು ನಿಜವೊ ಸುಳ್ಳೊ ಒಂದು ತಿಳಿಯದಂತೆ ಗರ ಬಡಿದಹಾಗೆ ನಿಂತು ಬಿಟ್ಟಿದ್ದೆ. ನೀರು ಸಿಕ್ಕ ಸಂತಸದಲ್ಲಿ ಕುಶರಾಜಪ್ಪನಂತೂ ಗಾಳಿಯಲ್ಲಿ ತನ್ನ ಟವಲ್ ನ್ನು ಬೀಸುತ್ತಾ ಅವನ ಆನಂದವನ್ನು ವ್ಯಕ್ತಪಡಿಸುತಿದ್ದದ್ದುನ್ನು ಕಂಡ ನನಗೆ ನನ್ನರಿವಿಗೆ ಬರುವ ಮೊದಲೇ ಕಣ್ಣಾಲಿಗಳು ತುಂಬಿ ಬಂದು ಕಣ್ಣಿನಿಂದ ನೀರು ದಾರಕಾರವಾಗಿ ಕೆನ್ನೆಯ ಮೇಲೆ ಹರಿಯುತಿತ್ತು.

ಅತ್ತ ಕಡೆ ಬೋರ್ವೆಲ್ಲ ಪಾಯಿಂಟ್ ನಿಂದ ಹೊರಬಂದು ಹಾಲಿನಂತೆ ಉಕ್ಕಿ ಉಕ್ಕಿ ಹರಿಯುತ್ತಿದ್ದ ನೀರು ಊರಿನ ಎಲ್ಲರ ಹೃನ್ಮನಗಳಲ್ಲಿ ಅಮೃತದಂತೆ ಪ್ರವಹಿಸುತಿತ್ತು. ಗೊತ್ತಿಲ್ಲ ಜನರ ನಂಬಿಕೆಯೋ? ಅರಿತೋ ಅರಿಯದೆಯೋ ಆಡಿದ ಮಾತುಗಳು, ಅದನ್ನೇ ನುಡಿಸಬೇಕೆಂದು ನುಡಿಸಿದ ದೈವ ನಿಯಮವೊ, ಕಾಕತಾಳಿಯೋ, ಕೈಯಲ್ಲಿ ಹಿಡಿದಿದ್ದ "ಅಂಜನ" ದ ಶಕ್ತಿಯೋ? ಒಟ್ಟಾರೆಯಾಗಿ ಕಪ್ಪು ಡಬ್ಬಿಯಲ್ಲಿ ಅಡಗಿದ "ಅಂಜನ" ಎಲ್ಲರ ಮನಸ್ಸಿನಲ್ಲಿ ಅಡಗಿಕುಳಿತಿದ್ದ ಕತ್ತಲನ್ನು ಒಳ ಕಣ್ಣುಗಳ ಮೂಲಕ ತೆರೆಸಿತ್ತು! ಸೂರ್ಯ ಮುಳುಗುತಿದ್ದಂತೆ ಇತ್ತ ಹೊರನೋಟಕ್ಕೆ ಸುತ್ತಲೂ ಕತ್ತಲೆ ಆವರಿಸಿತು, ಒಳಗಣ ಸೂರ್ಯ ಹೊನ್ನಿನ ಬಣ್ಣ ಹೊತ್ತು ಬೆಳಗುತ್ತಿದ್ದ. ಹಾಳಾದ ಈ "ಅಂಜನ"ದ ಸಹವಾಸವೆ ಬೇಡ, ಒಂದು ವಾರದಿಂದ ಶಾಲೆಯಲ್ಲಿ ನೀಡಿದ ಹೋಂ ವರ್ಕ ಬಾಕಿ ಇದೆ ಎನ್ನುತ್ತ ಮನೆಯ ಕಡೆಗೆ ಓಡಿ ಹೋದೆ.

## ಸ್ನಾತಕೋತ್ತರ ಪದವಿಗಳಿದ್ದರೂ ನಿರುದ್ಯೋಗಿಗಳು

# ಅವಕಾಶ ಕೊಡದೇ ಅನುಭವ ಹೇಗೆ ಸಾಧ್ಯ?

■ ಡಾ.ಸುಮಲತ ಬಿ.ಎಂ



ಹಿಂದಿನ ಕಾಲದಲ್ಲಿ ಅಂದರೆ ನಮ್ಮ ತಂದೆ–ತಾಯಿ, ಅಜ್ಜ–ಅಜ್ಜಿಯ ಕಾಲದಲ್ಲಿ 10ನೇ ತರಗತಿ ಮುಗಿದಿದೆ ಎಂದರೆ ಅವರಿಗೆ ಟೀಚರ್ ಕೆಲಸ ಕಾಯಂ ಆಗುತ್ತಿತ್ತು. ಮನೆಗೆ ಬಂದು ಕರೆದು ಕೆಲಸ ಕೊಡುತ್ತಿದ್ದಿರು. ಆದರೆ ಹಿಂದಿನ ಕಾಲದಲ್ಲಿ ಪದವಿ ಓದುವವರು ಕಡಿಮೆ ಮತ್ತು ಕಷ್ಟದ ಕೆಲಸ. ನಮ್ಮ ಅತ್ತೆ, ನಮ್ಮ ಅವ್ವ ಇವಾಗಲೂ ಹೇಳುವುದು ಏನಂದರೆ ನಾವು 10ನೇ ತರಗತಿ ಓದಿದ್ದರೆ ನಮಗೆ ಕೆಲಸ ಕೊಡುತ್ತಿದ್ದರು ಆದರೆ ನಮ್ಮ ಅಮ್ಮ ಅಪ್ಪ ಓದಿಸಲೇ ಇಲ್ಲ ಸಣ್ಣ ವಯಸ್ಸಿಗೆ ಮದುವೆ ಮಾಡಿ ಕಳುಹಿಸಿದರು ಎಂದು ಈಗಲೂ ಗೋಳಾಡುತ್ತಾರೆ.

ಆದರೆ ಇಂದಿನ ಪರಿಸ್ಥಿತಿ ಏನಾಗಿದೆ ಎಂದರೆ ಪದವಿ ಪೂರ್ವ, ಪದವಿ, ಸ್ನಾತಕ ಪದವಿ, ಪಿಎಚ್.ಡಿ, ಪಿ.ಡಿಎಫ್, ಇರೋ ಬರೋ ಪದವಿಗಳನ್ನು ಮುಗಿಸಿದರು ನಿರುದ್ಯೋಗಿಯಾಗಿದ್ದಾರೆ. ಇದಕ್ಕೆಲ್ಲ ಮುಖ್ಯ ಕಾರಣಗಳು ಏನಂದರೆ ಯುಜಿಸಿಯು ದಿನಾಂಕ 18/07/2018ರಂದು ಹೊರಡಿಸಿದ ಅಧಿಸೂಚನೆಯಲ್ಲಿ ಪದವಿ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪ್ರಕ್ರಿಯೆಯ ನಿಯಮಗಳ ಮಾನದಂಡಗಳನ್ನು ಟೇಬಲ್ ನಂಬರ್ 3ಬಿ ಯಲ್ಲಿ ಸ್ಪಷ್ಟವಾಗಿ ನಿಗದಿಪಡಿಸಿದೆ ಹಾಗೂ ಅವನ್ನು ಗ್ವಜೆಟ್ ಆಫ್ ಇಂಡಿಯಾದಲ್ಲೂ ಅದೇ ದಿನಾಂಕದಂದು ಪ್ರಕಟಿಸಿದೆ.

**ಆ ನಿಯಮಗಳ ಮಾನದಂಡಗಳು ಮತ್ತು ಅವುಗಳಿಗೆ ನೀಡಿದ ಅಂಕಗಳನ್ನು ಹೀಗೆ ನಿಗದಿಪಡಿಸಿದೆ:**

1. ಸ್ನಾತಕ ಪದವಿಗೆ ಗರಿಷ್ಟ 21 ಅಂಕ, ಕನಿಷ್ಟ 10 ಅಂಕ.
2. ಸ್ನಾತಕೋತ್ತರ ಪದವಿಗೆ ಗರಿಷ್ಟ 25 ಅಂಕ, ಕನಿಷ್ಟ 20 ಅಂಕ.





3. ಎಂ.ಫಿಲ್. ಪದವಿಗೆ ಗರಿಷ್ಟ 7 ಅಂಕ, ಕನಿಷ್ಟ 5 ಅಂಕ
4. ಪಿಎಚ್.ಡಿ ಪದವಿಗೆ 25 ಅಂಕ.
5. ನೆಟ್ ಜೆ.ಆರ್.ಆಫ್ ಗೆ 10 ಅಂಕ, ನೆಟ್ ಗೆ 8 ಅಂಕ, ಸೆಟ್ ಗೆ 5 ಅಂಕ
6. ಪ್ರತೀ ಸಂಶೋಧನಾ ಲೇಖನಗಳಿಗೆ 2 ರಂತೆ ಗರಿಷ್ಟ 6 ಅಂಕ.
7. ಬೋಧನೆಯ ಅನುಭವ (ವರ್ಷಕ್ಕೆ 2ರಂತೆ ಗರಿಷ್ಟ 10ಅಂಕ) ಅಥವಾ ಪಿಡಿಎಫ್ ಆಗಿದ್ದರೆ 10 ಅಂಕ ಮತ್ತು 8 ಅಂಕ, ರಾಷ್ಟ್ರೀಯ ಪ್ರಶಸ್ತಿಗೆ 3, ರಾಜ್ಯ ಪ್ರಶಸ್ತಿಗೆ 2, ಗರಿಷ್ಟ 3 ಅಂಕ.

ಹೀಗೆ ಒಟ್ಟು 100 ಅಂಕಗಳ ನೇಮಕಾತಿ ನಿಯಮಗಳ ಮಾನದಂಡಗಳನ್ನು ನಿಗದಿಪಡಿಸಿದೆ. ಈ ಮಾನದಂಡಗಳ ಪ್ರಕಾರ ಅರ್ಹ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆದು ಅವರಿಗೆ ಸಂದರ್ಶನ ಮಾಡಿ ನೇಮಕಾತಿ ಮಾಡಿಕೊಳ್ಳಬೇಕು ಎಂದು ಯುಜಿಸಿ ಸ್ಪಷ್ಟವಾಗಿ ತಿಳಿಸಿದೆ. ಆದರೆ ನೇಮಕಾತಿ ಪಾರದರ್ಶಕವಾಗಿ ನಡೆಯುತ್ತವೆಯೇ ಎಂಬುದು ಉನ್ನತ ಪಧವೀದರರ ಪ್ರಶ್ನೆ?

ಈ ಉನ್ನತ ಪದವಿ ಮುಗಿಸುವದೊರಳಗೆ ವಿದ್ಯಾರ್ಥಿಯ ವಯಸ್ಸು ಮೀರಿ ಹೋದರೆ ಕೆಲಸ ಸಿಗುವುದು ಕಷ್ಟ. ಮತ್ತು ಎಲ್ಲಾ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಜಾಸ್ತಿ ಅನುಭವ ಕೇಳುವುದು ಎಷ್ಟು ಸರಿ? ಕೆಲಸ ಕೊಟ್ಟರೆ ತಾನೇ ಅನುಭವ ಆಗುವುದು. ಹೊಸ ಅಭ್ಯರ್ಥಿಗಳು ಭವಿಷ್ಯವನ್ನು ಕಾಪಡುವವರುಯಾರು? ಹಾಗಾದರೆ ಪದವಿಗಳು ಹೆಚ್ಚಾದಷ್ಟು ನಿರುದ್ಯೋಗದ ಸಮಸ್ಯೆ ಎದುರಿಸಬೇಕೇ? ಹೊಸಬರ ಪ್ರತಿಭೆ ಮತ್ತು ವಿಷಯಜ್ಞಾನ ಹೊಂದಿದ್ದರು ಅದಕ್ಕೆ ಬೆಲೆ ಕೊಡದ ಆಡಳಿತ ವರ್ಗ, ಬೋಧನೆಯ ಅನುಭವವನ್ನು ಮಾತ್ರ ಕೇಳುತ್ತದೆ. ಆದರೆ 2020ರಲ್ಲಿ ಕೇಂದ್ರ ಸರಕಾರವು ಸಂಶೋಧನೆಗೆ ಹೆಚ್ಚು ಮಹತ್ವಕೊಟ್ಟಿದೆ. ಅದಕ್ಕಾಗಿ ಪದವಿ ಹಂತದಿಂದಲೇ ವಿದ್ಯಾರ್ಥಿಗಳಿಗೆ ಪಠ್ಯದಲ್ಲಿ ಸಂಶೋಧನಾ ವಿಷಯವನ್ನು ಬೋಧಿಸಲಾಗುತ್ತಿದೆ. ಹಾಗೂ 5–6 ವರ್ಷ ಪಿಎಚ್.ಡಿಯಲ್ಲಿ ಸಂಶೋಧನೆ ಮಾಡಿದವರು, ಪಿ.ಡಿಎಫ್ ಮಾಡಿದ ಅನುಭವ ಸಾಲದೆ. ಸಂಶೋಧನೆ ಜ್ಞಾನ ಮತ್ತು ಅನುಭವವನ್ನು ಪರಿಗಣಿಸದಿದ್ದರೆ ಅವುಗಳ ಪ್ರಯೋಜನ ಏನು? ಕೆಲಸವನ್ನು ಕೊಡದೆ, ಹೊಸ ಕೆಲಸವನ್ನು ಸೃಷ್ಟಿ ಮಾಡದೆ ಬೋಧನಾ ಅನುಭವ ಕೇಳಿದರೆ ಎಲ್ಲಿಂದತರುವುದು? ಅದೇನು ಮಾರ್ಕಟ್‌ನಲ್ಲಿ ಸಿಗುವ ವಸ್ತುವಲ್ಲ ಕೊಂಡಕೊಂಡು ಬರುವುದಕ್ಕೆ. ಕರೆದು ಕೆಲಸ ಕೊಡುವ ಕಾಲ ಮತ್ತೆ ಬರುವುದಾ? ನಿರುದ್ಯೋಗ ಸಮಸ್ಯೆ ನಿರ್ಮೂಲನೆ ಆಗುವುದಾ?.




ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join for to Get Daily E-paper

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**09–06–2024 – ಭಾನುವಾರ**

| | |
|---|---|
| ತಿಥಿ | : ತೃತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪುನರ್ವಸು |
| ಯೋಗ | : ವೃದ್ಧಿ |
| ಕರಣ | : ಗರಜ |
| ಸೂರ್ಯೋದಯ | : 05:41:47 |
| ಸೂರ್ಯಾಸ್ತ | : 19:10:54 |
| ರಾಹು | : 17:30–19:11 |
| ಯಮಘಂಡ | : 12:26–14:07 |
| ಗುಳಿಕ | : 15:49–17:30 |

## ತುಂಗಭದ್ರಾ ನೀರಿನ ಮಟ್ಟ



**ಶನಿವಾರ : 08–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.86 ಅಡಿ |
| ಒಳ ಹರಿವು | 1490 ಕ್ಯುಸೆಕ್ |
| ಹೊರ ಹರಿವು | 10 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.942 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1581.11 ಅಡಿ |
| ಒಳ ಹರಿವು | 468 ಕ್ಯುಸೆಕ್ |
| ಹೊರ ಹರಿವು | 246 ಕ್ಯುಸೆಕ್ |
| ಸಾಮರ್ಥ್ಯ | 5.035 ಟಿಎಂಸಿ |

# ಹಂಪಿಯಲ್ಲಿ ವೀಕೆಂಡ್‌ಗೆ ಹೆಚ್ಚಿದ ಪ್ರವಾಸಿಗರು ಕೆಸರಲ್ಲೆ ಪಾದಚಾರಿಗಳ ಪಯಣ

### ಬ್ಯಾಟರಿವಾಹನ ಚಾಲಕರು, ಪ್ರಯಾಣಿಕರಿಗೆ ತಪ್ಪದ ಆತಂಕ । ಮಾರ್ಗ ದುರಸ್ಥಿಗಿಲ್ಲವೆ ಭಾಗ್ಯ?





**ಹಂಪಿ ಟೈಮ್ಸ್ ಹೊಸಪೇಟೆ**
ಮಳೆಗಾಲ ಆರಂಭವಾಗಿದೆ. ಚುನಾವಣೆ ಚಟುಟಿಕೆಗಳು ಪೂರ್ಣಗೊಂಡು, ನೀತಿ ಸಂಹಿತೆ ಕೊನೆಗೊಂಡಿದ್ದರಿಂದ ವೀಕೆಂಡ್ ಶನಿವಾರ ದಿನ ನಿರೀಕ್ಷೆಯಂತೆ ಹಂಪಿಗೆ ಪ್ರವಾಸಿಗರ ಸಂಖ್ಯೆ ಹೆಚ್ಚಳಗೊಂಡಿದೆ. ದೂರದಿಂದ ಬಂದ ಪ್ರವಾಸಿಗರು ಜಿಟಿ ಜಿಟಿ ಸುರಿಯುವ ಮಳೆಯ ನಡುವೆಯೂ ಹಂಪಿ ಸ್ಮಾರಕಗಳನ್ನು ಕಣ್ತುಂಬಿ ಕೊಂಡು, ಫೋಟೊಗಳನ್ನು ತೆಗಿಸಿಕೊಂಡು, ಸೆಲ್ಫಿಗೆ ಮುಖಮಾಡಿ ಖುಷಿಪಟ್ಟಿದ್ದಾರೆ. ಆದರೆ ಸ್ಮಾರಕಗಳನ್ನು ನೋಡಲು ತೆರಳುವ ಮಾರ್ಗದಲ್ಲಿರುವ ತಗ್ಗು ಗುಂಡಿಗಳಲ್ಲಿ ಮಳೆನೀರು ನಿಂತಿದ್ದರಿಂದ ಪ್ರವಾಸಿಗರು ಆತಂಕದಲ್ಲೇ ಪ್ರಯಾಣಿಸಿದರು.

ಕಲ್ಲಿನ ರಥವನ್ನು ವೀಕ್ಷಿಸಲು ಬರುವ ಪ್ರವಾಸಿಗರು ಗೆಜ್ಜಲ ಮಂಟಪದಿಂದ ವಿಜಯ ವಿಠಲ ದೇವಸ್ಥಾನದವರಗೆ ಬ್ಯಾಟರಿವಾಹನಗಳ ಮೊರೆ ಹೋಗುವುದು ಸಹಜ. ಆದರೆ ಪ್ರವಾಸಿಗರ ಸಂಖ್ಯೆಗನುಗುಣವಾಗಿ ಬ್ಯಾಟರಿ ವಾಹನಗಳು ಲಭ್ಯವಿಲ್ಲ. ಬ್ಯಾಟರಿ ವಾಹನಗಳನ್ನು ಕಾಯುತ್ತಾ ಕುಳಿತರೆ ಸಮಯದ ಅಭಾವ ಎದುರಾಗುವುದರಿಂದ ಅನೇಕರು ನಡೆದುಕೊಂಡು ಹೋಗುತ್ತಾರೆ. ಆದರೆ ನಡೆದು ಹೋಗುವ, ಬ್ಯಾಟರಿ ವಾಹನ ಸಾಗುವ ಮಾರ್ಗ ಕೆಸರುಮಯವಾಗಿರುವುದರಿಂದ ಬೇಸರಿಸಿಕೊಳ್ಳುತ್ತಿದ್ದಾರೆ. ವಿಶ್ವಪರಂಪರ ತಾಣವಾಗಿರುವ ಹಂಪಿಯಲ್ಲಿ ಕನಿಷ್ಠ ಪಾದಚಾರಿಗಳ ರಸ್ತೆಯೂ ಸರಿಯಾಗಿಲ್ಲ. ರಸ್ತೆ, ಮೂಲಭೂತ ಸೌಲಭ್ಯಗಳನ್ನು ಕಲ್ಪಿಸದ ಸಂಬಂಧಿಸಿದ ಇಲಾಖೆಗಳ ವಿರುದ್ಧ ಪ್ರವಾಸಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸ್ಮಾರಕಗಳ ವೀಕ್ಷಣೆಗೆ ಹಣ ಪಡೆಯುವ ಇಲಾಖೆಗಳು, ಪ್ರವಾಸಿಗರಿಗೆ ಸೌಲಭ್ಯಗಳನ್ನು ಕಲ್ಪಿಸಬೇಕು. ದೂರು ಸಲ್ಲಿಸಲು ಇಲ್ಲವೆ ಅಗತ್ಯ ಮಾಹಿತಿ ಪಡೆಯಲು ಸಹಾಯ ವಾಣಿಗಳನ್ನು ಕಣ್ಣಿಗೆ ಕಾಣುವಂತೆ ಪಾದಾಚಾರಿಗಳ ಮಾರ್ಗದುದ್ದಕ್ಕೂ ಅಳವಡಿಸಬೇಕು ಎಂಬುದು ಪ್ರವಾಸಿಗರ ಆಗ್ರಹವಾಗಿದೆ.





## ವಿಜ್ಞಾನ

# ಬಿಕ್ಕಳಿಗೆ ಏಕೆ ಬರುತ್ತದೆ?

**ಆರ್.ಬಿ.ಗುರುಬಸವರಾಜ**

ಮೋನಿ ತಾತನೊಡನೆ ಊಟಕ್ಕೆ ಕುಳಿತಿದ್ದಳು. ಊಟ ಮಾಡುವಾಗ ತಾತನಿಗೆ ಬಿಕ್ಕಳಿಕೆ ಶುರುವಾಯಿತು. ಅಜ್ಜಿ ನಿಧಾನವಾಗಿ ನೀರು ಕುಡಿಯಲು ಹೇಳಿದಳು. ಸ್ವಲ್ಪ ಸಮಯದ ನಂತರ ಬಿಕ್ಕಳಿಗೆ ನಿಂತಿತು. 'ತಾತ ಬಿಕ್ಕಳಿಗೆ ಯಾಕೆ ಬರುತ್ತೆ?' ಎಂದು ಪ್ರಶ್ನಿಸಿದಳು. ಅದಕ್ಕೆ ತಾತನ ಉತ್ತರ ಹೀಗಿತ್ತು. 'ಡಯಾಫ್ರಾಮ್' ಎದೆ ಮತ್ತು ಹೊಟ್ಟೆಯನ್ನು ಬೇರ್ಪಡಿಸುವ ದೊಡ್ಡ ಸ್ನಾಯುವಾಗಿದ್ದು, ಉಸಿರಾಟವನ್ನು ನಿಯಂತ್ರಿಸುವಲ್ಲಿ ಸಹಾಯ ಮಾಡುತ್ತದೆ. ಡಯಾಫ್ರಾಮ್ ಸ್ನಾಯುವಿನ ಹಠಾತ್ ಅಥವಾ ಅನೈಚ್ಛಿಕ ಸಂಕೋಚನದಿಂದ (ಸೆಳೆತ) ಬಿಕ್ಕಳಿಸುವಿಕೆ ಸಂಭವಿಸುತ್ತದೆ. ಡಯಾಫ್ರಾಮ್‌ನ ಹಠಾತ್ ಸಂಕೋಚನವು ಧ್ವನಿ ಪೆಟ್ಟಿಗೆಯನ್ನು ಮುಚ್ಚಲು ಕಾರಣವಾಗುತ್ತದೆ ಮತ್ತು 'ಹಿಕ್' ಎಂಬ ಧ್ವನಿಯನ್ನು ಉತ್ಪಾದಿಸುತ್ತದೆ.



ಡಯಾಫ್ರಾಮ್ ಸೆಳೆತವನ್ನು ಪ್ರಚೋದಿಸುವ ಮತ್ತು ಬಿಕ್ಕಳಿಕೆಗೆ ಕಾರಣವಾಗುವ ಹಲವಾರು ಅಂಶಗಳಿವೆ. ಬಿಕ್ಕಳಿಕೆಗೆ ಕೆಲವು ಸಾಮಾನ್ಯ ಕಾರಣಗಳು ಹೀಗಿವೆ. ಬೇಗಬೇಗನೆ ತಿನ್ನುವುದು ಅಥವಾ ಅತಿಯಾಗಿ ತಿನ್ನುವುದು ಬಿಕ್ಕಳಿಕೆಗೆ ಕಾರಣವಾಗಿದೆ. ಬೇಗನೆ ತಿಂದಾಗ ಅಥವಾ ಹೆಚ್ಚಿನ ಪ್ರಮಾಣದ ಆಹಾರವನ್ನು ಸೇವಿಸಿದಾಗ, ಹೊಟ್ಟೆಯು ಉಬ್ಬಿಕೊಳ್ಳಬಹುದು ಮತ್ತು ಡಯಾಫ್ರಾಮ್ ಅನ್ನು ಕೆರಳಿಸಬಹುದು ಇದು ಬಿಕ್ಕಳಿಕೆಗೆ ಕಾರಣವಾಗುತ್ತದೆ. ಸೋಡಾದಂತಹ ಕಾರ್ಬೋನೇಟೆಡ್ ಪಾನೀಯಗಳನ್ನು ಕುಡಿಯುವುದರಿಂದಲೂ ಬಿಕ್ಕಳಿಗೆ ಬರುತ್ತದೆ. ಸೋಡಾದಂತಹ ಪಾನೀಯಗಳ ಕಾರ್ಬೋನೇಷನ್ ಹೊಟ್ಟೆಯನ್ನು ಹಿಗ್ಗಿಸಲು ಮತ್ತು ಬಿಕ್ಕಳಿಕೆಯನ್ನು ಪ್ರಚೋದಿಸಲು ಕಾರಣವಾಗಬಹುದು. ಆಲ್ಕೋಹಾಲ್ ಸೇವನೆಯೂ ಸಹ ಬಿಕ್ಕಳಿಕೆಗೆ ಕಾರಣ. ಆಲ್ಕೋಹಾಲ್ ಅನ್ನನಾಳ ಮತ್ತು ಹೊಟ್ಟೆಯ ಒಳಪದರವನ್ನು ಕೆರಳಿಸಬಹುದು. ಇದು ಬಿಕ್ಕಳಿಕೆಗೆ ಕಾರಣವಾಗಬಹುದು.

ಭಾವನಾತ್ಮಕ ಒತ್ತಡ ಅಥವಾ ಉತ್ಸಾಹವೂ ಕೂಡಾ ಕೆಲವೊಮ್ಮೆ ಬಿಕ್ಕಳಿಗೆ ಉಂಟು ಮಾಡುತ್ತದೆ. ಆತಂಕ ಅಥವಾ ಉತ್ಸಾಹದಂತಹ ಬಲವಾದ ಭಾವನೆಗಳು ಡಯಾಫ್ರಾಮ್‌ನ ಸೆಳೆತಕ್ಕೆ ಕಾರಣವಾಗಬಹುದು. ಕೆಲವು ವೈದ್ಯಕೀಯ ಪರಿಸ್ಥಿತಿಗಳು ಅಥವಾ ಔಷಧಿಗಳು ಸಹ ಬಿಕ್ಕಳಿಗೆ ಉಂಟುಮಾಡುತ್ತವೆ. ಗ್ಯಾಸ್ಟ್ರೋಸೊಫೇಜಿಲ್ ರಿಫ್ಲಕ್ಸ್ ಕಾಯಿಲೆಯಂತಹ ಕೆಲವು ವೈದ್ಯಕೀಯ ಪರಿಸ್ಥಿತಿಗಳು, ಸ್ಟೀರಾಯ್ಡ್‌ಗಳು ಅಥವಾ ಬೆಂಜೊಡಿಯಜೆಪೈನ್‌ಗಳಂತಹ ಕೆಲವು ಔಷಧಿಗಳು ಅಡ್ಡಪರಿಣಾಮವಾಗಿ ಬಿಕ್ಕಳಿಕೆಯನ್ನು ಉಂಟುಮಾಡಬಹುದು.

ಬಹುತೇಕ ಸಂದರ್ಭಗಳಲ್ಲಿ ಬಿಕ್ಕಳಿಕೆಯು ತೊಂದರೆದಾಯಕವಲ್ಲ. ಕೆಲವು ನಿಮಿಷಗಳ ನಂತರ ತಾನಾಗಿಯೇ ಹೋಗುತ್ತದೆ. ಆದಾಗ್ಯೂ ಬಿಕ್ಕಳಿಕೆಗಳು 48 ಗಂಟೆಗಳಿಗಿಂತ ಹೆಚ್ಚು ಕಾಲ ಮುಂದುವರಿದರೆ ಅಥವಾ ಇತರ ರೋಗಲಕ್ಷಣಗಳೊಂದಿಗೆ ಇದ್ದರೆ ವೈದ್ಯರನ್ನು ಭೇಟಿ ಮಾಡುವುದು ಅವಶ್ಯಕ.

IN THE COURT OF THE CIVIL JUDGE JMFC AT KUDLIGI
Cri. Misc No750/2023

Between:
Shanthamma w/o Putteru Chowdappa, Aged about 81 years, Hindu, Agriculturist R/o Harakabhavi Village in Kudligi Taluk, Vijayanagara District. ---- Petitioner
AND
The Tahasildar Kudligi ----Respondent

**SUMMONS TO INTERERSTED 20(A) R/W SEC 151 OP CPC FILED ON BEHALF OF THE PERSON U/OV RULE PETITIONER.**

Whereas the above Petitioner has instituted above petition to get the death certificate of deceased petitioner's Mother-in-law by name late Maramma w/o Late Rudrappa was died on 01/06/1930 at Harakabhavi village, in Kudligi Taluk, and Vijayangara District. On the file of the civil Judge & JMFC at Kudligi, The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 10--06/ 2023 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined exparte. Given under my hand and seal of this Hon'ble Court on 7/6/2023.

By Order of the court
Chief Ministarial Officer
Civil Judge (JD) Court kudligi

Sri. H. Venkatesh ,Advocate, Kudligi

# ಶಾಲೆಗೆ ಡಿಸಿ ದಿಢೀರ್ ಭೇಟಿ ಗೈರಾಗಿದ್ದ ಶಿಕ್ಷಕರಿಗೆ ನೋಟೀಸ್



**ಹಂಪಿ ಟೈಮ್ಸ್ ಹೊಸಪೇಟೆ:**
ನಗರದಲ್ಲಿ ಶನಿವಾರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ನಗರಸಂಚಾರ ನಡೆಸಿ, ರಾಣಿಪೇಟೆಯ ವಿವೇಕಾನಂದ ಸರ್ಕಾರಿ ಹಿ.ಪ್ರಾ.ಶಾಲೆಗೂ ಭೇಟಿ ನೀಡಿದರು. ಶಿಕ್ಷಕರು ಶಾಲೆಯಲ್ಲಿ ಇಲ್ಲದಿರುವುದು ಕಂಡಬಂದಿದ್ದರಿಂದ ಗೈರಾದ ಶಿಕ್ಷಕರಿಗೆ ನಿಯಮಾನುಸಾರ ನೋಟೀಸ್ ಜಾರಿ ಮಾಡಲು ಡಿಡಿಪಿಐಗೆ ಡಿಸಿ ಸೂಚಿಸಿದರು.




# ಭೂಮಿಗೆ ಸುರಿವ ರಸಾಯನಿಕ ಮರಳಿ ನಮಗೆ ಆಹಾರವಾಗಲಿದೆ

### ನಿರಂಜನಪ್ರಭು ಮಹಾಸ್ವಾಮಿಗಳ ಹೇಳಿಕೆ

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ:**
ಆಧುನಿಕ ಜೀವನಶೈಲಿಯಲ್ಲಿ, ನಮ್ಮ ಆಹಾರ ಪದ್ದತಿಗಳನ್ನು ಬದಲಿಸಿಕೊಂಡು ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ ಎಂದು ಗರಗ ನಾಗಲಾಪುರದ ಶ್ರೀಗುರುಒಪ್ಪತ್ತೇಶ್ವರಮಠದ ನಿರಂಜನಪ್ರಭು ಮಹಾಸ್ವಾಮಿಗಳು ಹೇಳಿದರು. ಶ್ರೀಮಠದಲ್ಲಿ ಪ್ರತಿವರ್ಷದಂತೆ, ಮೃಗಶಿರ ಮಳೆ ಕೂಡುವ ವೇಳೆ ವಿತರಿಸುವ ಔಷಧಿಯನ್ನು ವಿತರಿಸಿ ಆಶೀರ್ವಚನ ನೀಡಿದರು. ಇಂದು ಕೃಷಿಭೂಮಿಗೆ ಸಾವಯವಗೊಬ್ಬರ, ದೇಸಿ ಬಿತ್ತನೆಬೀಜಗಳ ಬದಲಿಗೆ, ರಾಸಾಯನಿಕ ಗೊಬ್ಬರ, ಔಷಧಿಯನ್ನು ಯಥೇಚ್ಛವಾಗಿ ಬಳಸುತ್ತಿರುವುದರಿಂದ ನಾವು ಬಳಸುವ ಆಹಾರಧಾನ್ಯಗಳಲ್ಲಿ ಜೀವಸತ್ವ ಕಳೆದುಹೋಗಿದೆ.

ನೈಸರ್ಗಿಕವಾಗಿ ಸಿಗುವ ಆಹಾರ ಪದಾರ್ಥಗಳನ್ನು ಬಳಸಿಕೊಂಡ, ನಮ್ಮ ಪೂರ್ವಜರು ಧೀರ್ಘಾಯುಷಿ ಹಾಗು ಬಲಶಾಲಿಗಳಾಗಿದ್ದರು, ಆದ್ದರಿಂದ ಫಾಸ್ಟ್ ಫುಡ್, ಜಂಕ್ ಫುಡ್ ಗಳಿಂದ ದೂರವಿರಲು ಸಲಹೆಮಾಡಿದರು. ಅಲ್ಲದೆ ಯುವಕರು ನಮ್ಮಸಂಸ್ಕಾರ, ಸಂಸ್ಕೃತಿಗಳನ್ನು ಅಳವಡಿಸಿಕೊಂಡು ಸುಶಿಕ್ಷಿತರಾಗಬೇಕು, ಧಾರ್ಮಿಕ ಕಾರ್ಯಕ್ರ.ಗಳಲ್ಲಿ ತೊಡಗಿಕೊಂಡು ಸಂಸ್ಕಾರಿಗಳಾಗಿ, ದುಶ್ಚಟಗಳಿಂದ ಮುಕ್ತರಾಗಿ ಸಮಾಜದಲ್ಲಿ ಮಾದರಿವ್ಯಕ್ತಿಗಳಾಗಿರಿ ಎಂದರು. ನಂತರ ನೂರಾರು ಜನರಿಗೆ ಔಷಧಿಯನ್ನು ವಿತರಿಸಿದರು.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA